# ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಅಧಿನಿಯಮ, 1976

[9-5-2003 ರ ಭಾರತ ರಾಜಪತ್ರದ IX ನೇ ಭಾಗದ, 1 ನೇ ವಿಭಾಗದ, 24 ನೇ ಸಂಪುಟದ, 1 ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 26 ರಿಂದ 36 ರ ವರೆಗಿನ ಪುಟಗಳಲ್ಲಿ ಪ್ರಕಟಿತ]

## ವಿಷಯಾನುಕ್ರಮಣಿಕೆ

### ಅಧ್ಯಾಯ I
### ಪ್ರಾರಂಭಿಕ

ಪ್ರಕರಣ:


1 ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ

2 ಪರಿಭಾಷೆಗಳು


### ಅಧ್ಯಾಯ II
### ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ನಿಗಮನ ಮತ್ತು ಬಂಡವಾಳ


3 ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಸ್ಥಾಪನೆ ಮತ್ತು ಅವುಗಳನ್ನು ನಿಗಮನಗೊಳಿಸುವುದು

4 ಕಚೇರಿಗಳು ಮತ್ತು ಏಜೆನ್ಸಿಗಳು

5 ಅಧಿಕೃತ ಬಂಡವಾಳ

6 ಹೊರಡಿಸಲಾದ ಬಂಡವಾಳ

7 ಷೇರುಗಳು ಅನುಮೋದಿತ ಭದ್ರತೆಗಳಾಗಿರತಕ್ಕುದು


### ಅಧ್ಯಾಯ III
### ವ್ಯವಸ್ಥಾಪನೆ


8 ವ್ಯವಸ್ಥಾಪನೆ

9 ನಿರ್ದೇಶಕರ ಮಂಡಳಿ

10 ನಿರ್ದೇಶಕನ ಪದಾವಧಿ

11 ಅಧ್ಯಕ್ಷ

12 ಅನರ್ಹತೆಗಳು

13 ನಿರ್ದೇಶಕ ಸ್ಥಾನವು ತೆರವಾಗುವಿಕೆ

14 ಮಂಡಳಿಯ ಸಭೆಗಳು

15 ಮಂಡಳಿಯ ಸಮಿತಿಗಳು

16 ಸಮಿತಿಗಳ ನಿರ್ದೇಶಕರು ಮತ್ತು ಸದಸ್ಯರ ಫೀಜು ಮತ್ತು ಭತ್ಯಗಳು

17 ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಸಿಬ್ಬಂದಿ

## ಅಧ್ಯಾಯ IV

## ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ವ್ಯವಹಾರಗಳು

18 ಪ್ರಾದೇಶಿಕ ಗ್ರಾಮೀಣ ಬ್ಯಾಂಕು ನಡೆಸಬಹುದಾದಂಥ ವ್ಯವಹಾರಗಳು

## ಅಧ್ಯಾಯ V

## ಲೆಕ್ಕ ಪತ್ರಗಳು ಮತ್ತು ಲೆಕ್ಕಪರಿಶೋಧನೆ

19 ಲೆಕ್ಕಪತ್ರಗಳ ಸಮಾಪ್ತಿ

20 ಷೇರುದಾರರಿಗೆ ವಾರ್ಷಿಕ ವರದಿಯನ್ನು ಒದಗಿಸತಕ್ಕುದು

21 ಲಾಭಗಳ ವಿಲೆ

22 ಆದಾಯ ತೆರಿಗೆ ಅಧಿನಿಯಮ, 1961ರ ಉದ್ದೇಶಕ್ಕಾಗಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಸಹಕಾರ ಸಂಘವಾಗಿರುವುದಾಗಿ ಭಾವಿಸತಕ್ಕುದು

23 ಬಡ್ಡಿ ತೆರಿಗೆಯನ್ನು ಸಂದಾಯ ಮಾಡತಕ್ಕುದಲ್ಲ

## ಅಧ್ಯಾಯ – Vಎ

## ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಸಮ್ಮಿಲನ

23ಎ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಸಮ್ಮಿಲನ

23ಬಿ 23ಎ ಪ್ರಕರಣದ ಮೇರೆಗಿನ ಅಧಿಸೂಚನೆಯು ಸಂಬಂಧಿಸಿದ ಪಕ್ಷಕಾರರಿಗೆ ಸಾಕಷ್ಟು ತಿಳಿವಳಿಕೆಯಾಗಿರತಕ್ಕುದು

23ಸಿ ವರ್ಗಾವಣೆಕಾರ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ವ್ಯವಹಾರದ ಸಮಾಪ್ತಿ

23ಡಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಸಮಾಪನ

## ಅಧ್ಯಾಯ VI

## ಸಂಕೀರ್ಣ

24 ನಿರ್ದೇಶನಗಳನ್ನು ಕೊಡಲು ಕೇಂದ್ರ ಸರ್ಕಾರದ ಅಧಿಕಾರ

24ಎ ಪ್ರಾಯೋಜಕ ಬ್ಯಾಂಕಿನಿಂದ ಪರಿಶೀಲನೆ, ಲೆಕ್ಕಪರಿಶೋಧನೆ ಮತ್ತು ಪರಿಶೋಧನೆ

25 ನಂಬಿಕೆ ಮತ್ತು ರಹಸ್ಯತೆಯ ಬಗ್ಗೆ ಬಾಧ್ಯತೆಗಳು

26 ಪ್ರಾದೇಶಿಕ ಗ್ರಾಮೀಣ ಬ್ಯಾಂಕನ್ನು ಸಮಾಪನಗೊಳಿಸಲು ಪ್ರತಿಷೇಧ

27 ನೇಮಕಾತಿ ಅಥವಾ ರಚನೆಯಲ್ಲಿನ ದೋಷಗಳು, ಕಾರ್ಯಗಳನ್ನು ಅಥವಾ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕುದಲ್ಲ

28 ನಿರ್ದೇಶಕರ ಬಗ್ಗೆ ನಷ್ಟಭರ್ತಿ, ಇತ್ಯಾದಿ
29 ನಿಯಮ ರಚನಾಧಿಕಾರ
30 ವಿನಿಯಮಗಳ ರಚನಾಧಿಕಾರ
31 ತೊಂದರೆಗಳ ನಿವಾರಣೆ
32 ಅಧಿನಿಯಮವು ಇತರ ಕಾನೂನುಗಳ ಉಪಬಂಧಗಳನ್ನು ಅಧ್ಯಾರೋಹಿಸತಕ್ಕುದು
ಅನುಸೂಚಿ

# ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಅಧಿನಿಯಮ, 1976

**(1976ರ ಅಧಿನಿಯಮ ಸಂಖ್ಯೆ 21)**

**[9ನೇ ಫೆಬ್ರವರಿ 1976]**

ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ, ವ್ಯಾಪಾರ, ವಾಣಿಜ್ಯ, ಕೈಗಾರಿಕೆ ಮತ್ತು ಇತರ ಉತ್ಪಾದನಾ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ವಿಶೇಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರು, ಕೃಷಿ ಕಾರ್ಮಿಕರು, ಕುಶಲಕರ್ಮಿಗಳು ಮತ್ತು ಸಣ್ಣ ಉದ್ಯಮದಾರರಿಗೆ, ಸಾಲ ಮತ್ತು ಇತರ ಸೌಲಭ್ಯಗಳನ್ನು ಒದಗಿಸುವ ಮೂಲಕ ಗ್ರಾಮೀಣ ಅರ್ಥ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ನಿಗಮನಗೊಳಿಸುವುದು, ಅವುಗಳ ನಿಯಂತ್ರಣ ಮತ್ತು ಸಮಾಪನಕ್ಕಾಗಿ ಮತ್ತು ಅವುಗಳಿಗೆ ಸಂಬಂಧಪಟ್ಟ ಮತ್ತು ಅವುಗಳಿಗೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿಸತಕ್ಕುದು:-

## ಅಧ್ಯಾಯ - I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಅಧಿನಿಯಮ, 1976 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು 1975ರ ಸೆಪ್ಟೆಂಬರ್ 26ನೇ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕುದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ ಸಂಬಂಧಪಟ್ಟಂತೆ "ಮಂಡಲಿ" ಎಂದರೆ ಆ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ನಿರ್ದೇಶಕರ ಮಂಡಲಿ;

(ಬಿ) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ ಸಂಬಂಧಪಟ್ಟಂತೆ "ಅಧ್ಯಕ್ಷ" ಎಂದರೆ ಆ ಬ್ಯಾಂಕಿನ ಅಧ್ಯಕ್ಷನೆಂದು 11ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಅಥವಾ ಪುನಃ ನೇಮಕಗೊಂಡ ವ್ಯಕ್ತಿ;

(ಸಿ) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ ಸಂಬಂಧಪಟ್ಟಂತೆ "ನಿರ್ದೇಶಕ" ಎಂದರೆ ಆ ಬ್ಯಾಂಕಿನ ಮಂಡಲಿಯ ಸದಸ್ಯ;

(ಸಿಎ) "ರಾಷ್ಟ್ರೀಯ ಬ್ಯಾಂಕ್" ಎಂದರೆ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿನ ರಾಷ್ಟ್ರೀಯ ಬ್ಯಾಂಕು ಅಧಿನಿಯಮ, 1981 (1981ರ 61)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿನ ರಾಷ್ಟ್ರೀಯ ಬ್ಯಾಂಕು;

(ಡಿ) "ಅಧಿಸೂಚಿತ ಪ್ರದೇಶ" ಎಂದರೆ 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಯಾವ ಸ್ಥಳೀಯ ಪರಿಮಿತಿಗಳಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಕಾರ್ಯ ನಿರ್ವಹಿಸತಕ್ಕುದೋ ಆ ಸ್ಥಳೀಯ ಪರಿಮಿತಿಗಳು;

(ಇ) “ನಿಯಮಿಸಲಾದುದು” ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಫ್) “ಪ್ರಾದೇಶಿಕ ಗ್ರಾಮೀಣ ಬ್ಯಾಂಕ್” ಎಂದರೆ 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಸ್ಥಾಪಿಸಲಾದ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್;

(ಜಿ) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ ಸಂಬಂಧಪಟ್ಟಂತೆ “ಪ್ರಾಯೋಜಕ ಬ್ಯಾಂಕ್” ಎಂದರೆ ಅಂಥ ಪ್ರಾದೇಶಿಕ ಗ್ರಾಮೀಣ ಬ್ಯಾಂಕನ್ನು ಪ್ರಾಯೋಜಿಸಿರುವಂಥ ಬ್ಯಾಂಕು;

(ಹೆಚ್)“ರಾಜ್ಯ ಸರ್ಕಾರ” ಎಂದರೆ-

(i) ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ ಸ್ಥಾಪಿಸಲಾಗಿರುವ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ;

(ii) ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ ಸಂಬಂಧಪಟ್ಟಂತೆ ಆ ರಾಜ್ಯದ ಸರ್ಕಾರ;

(ಐ) ಇಲ್ಲಿ ಉಪಯೋಗಿಸಲಾದ ಮತ್ತು ಪರಿಭಾಷಿಸಿಲ್ಲದ ಆದರೆ ಭಾರತದ ರಿಸರ್ವ್‌ಬ್ಯಾಂಕ್ ಅಧಿನಿಯಮ, 1934 (1934ರ 2) ಇದರಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕುದು;

(ಜೆ) ಇಲ್ಲಿ ಉಪಯೋಗಿಸಲಾದ ಮತ್ತು ಈ ಅಧಿನಿಯಮದಲ್ಲಾಗಲೀ ಅಥವಾ ಭಾರತದ ರಿಸರ್ವ್‌ಬ್ಯಾಂಕ್ ಅಧಿನಿಯಮ, 1934 (1934 ರ 2) ಇದರಲ್ಲಾಗಲಿ ಪರಿಭಾಷಿಸಿಲ್ಲದ, ಆದರೆ ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949 (1949 ರ 10) ಇದರಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕುದು.

## ಅಧ್ಯಾಯ - II

## ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ನಿಗಮನ ಮತ್ತು ಬಂಡವಾಳ

**3. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಸ್ಥಾಪನೆ ಮತ್ತು ಅವುಗಳನ್ನು ನಿಗಮನಗೊಳಿಸುವುದು.-** (1) ಕೇಂದ್ರ ಸರ್ಕಾರವು, ಪ್ರಾಯೋಜಕ ಬ್ಯಾಂಕು ಹಾಗೆ ಮಾಡಬೇಕೆಂದು ಕೋರಿಕೊಂಡರೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಒಂದು ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ಹೆಸರಿನೊಂದಿಗೆ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಸ್ಥಾಪಿಸಬಹುದು ಮತ್ತು ಸದರಿ ಅಥವಾ ತರುವಾಯದ ಅಧಿಸೂಚನೆಯ ಮೂಲಕ ಪ್ರತಿಯೊಂದು ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಕಾರ್ಯಾಚರಣೆ ನಡೆಸಬಹುದಾದಂಥ ಸ್ಥಳೀಯ ಪರಿಮಿತಿಗಳನ್ನು ನಿರ್ದಿಷ್ಟಪಡಿಸಬಹುದು.

(2) ಪ್ರತಿಯೊಂದು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಸ್ವತ್ತನ್ನು ಆರ್ಜಿಸಲು, ಧಾರಣ ಮಾಡಲು ಮತ್ತು ವಿಲೆ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಅಧಿಕಾರ ಸಹಿತ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕುದು, ಮತ್ತು ಅದರ ಹೆಸರಿನಲ್ಲಿ ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

(3) ಪ್ರಾಯೋಜಕ ಬ್ಯಾಂಕ್, ಅದು ಪ್ರಾಯೋಜಿಸಿದ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ, -

(ಎ) ಅಂಥ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಷೇರು ಬಂಡವಾಳವನ್ನು ಕೊಡುವ;

(ಬಿ) ಅಂಥ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಸಿಬ್ಬಂದಿಗೆ ತರಬೇತಿಯನ್ನು ಕೊಡುವ;

(ಸಿ) ಅದು ಕೆಲಸ ಮಾಡುವ ಮೊದಲ ಐದು ವರ್ಷದಲ್ಲಿ, ಅಂಥ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ, ಪ್ರಾಯೋಜಕ ಬ್ಯಾಂಕು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ನಡುವೆ ಪರಸ್ಪರವಾಗಿ ಒಪ್ಪಬಹುದಾದಂಥ ವ್ಯವಸ್ಥಾಪನಾ ಮತ್ತು ಹಣಕಾಸು ಸಹಾಯವನ್ನು ಒದಗಿಸುವ

-ಮೂಲಕ ನೆರವು ಮತ್ತು ಸಹಾಯವನ್ನು ಕೊಡುವುದು ಅದರ ಕರ್ತವ್ಯವಾಗಿರತಕ್ಕುದು :

ಪರಂತು, ಕೇಂದ್ರ ಸರ್ಕಾರವು ತಾನಾಗಿಯೇ ಆಗಲಿ ಅಥವಾ ರಾಷ್ಟ್ರೀಯ ಬ್ಯಾಂಕಿನ ಶಿಫಾರಸಿನ ಮೇಲೆಯೇ ಆಗಲಿ ಐದು ವರ್ಷಗಳ ಸದರಿ ಅವಧಿಯನ್ನು, ಅದು ವಿಧಿಸಲು ಸೂಕ್ತವೆಂದು ಭಾವಿಸುವಂಥ ಷರತ್ತುಗಳಿಗೆ ಒಳಪಟ್ಟು ಒಂದು ಬಾರಿಗೆ ಐದು ವರ್ಷಗಳಿಗೆ ಮೀರದಂತೆ ವಿಸ್ತರಿಸಬಹುದು.

**4. ಕಚೇರಿಗಳು ಮತ್ತು ಏಜೆನ್ಸಿಗಳು.-** (1) ಪ್ರಾದೇಶಿಕ ಗ್ರಾಮೀಣ ಬ್ಯಾಂಕ್, ಕೇಂದ್ರ ಸರ್ಕಾರವು, ರಾಷ್ಟ್ರೀಯ ಬ್ಯಾಂಕ್ ಮತ್ತು ಪ್ರಾಯೋಜಕ ಬ್ಯಾಂಕಿನೊಂದಿಗೆ ಸಮಾಲೋಚಿಸಿದ ತರುವಾಯ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅಧಿಸೂಚಿತ ಪ್ರದೇಶದಲ್ಲಿನ ಅಂಥ ಸ್ಥಳದಲ್ಲಿ ಅದರ ಮುಖ್ಯ ಕಚೇರಿಯನ್ನು ಹೊಂದಿರತಕ್ಕುದು.

(2) ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಹಾಗೆ ಮಾಡುವುದು ಅವಶ್ಯವೆಂದು ಅದು ಅಭಿಪ್ರಾಯಪಟ್ಟರೆ ಅಧಿಸೂಚಿತ ಪ್ರದೇಶದಲ್ಲಿನ ಯಾವುದೇ ಸ್ಥಳದಲ್ಲಿ ಅದರ ಶಾಖೆಗಳು ಅಥವಾ ಏಜೆನ್ಸಿಗಳನ್ನು ಸ್ಥಾಪಿಸಬಹುದು.

**5. ಅಧಿಕೃತ ಬಂಡವಾಳ.-** ಪ್ರತಿಯೊಂದು ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಅಧಿಕೃತ ಬಂಡವಾಳವು, ಪ್ರತಿಯೊಂದು ಒಂದು ನೂರು ರೂಪಾಯಿಗಳ ಪೂರ್ಣ ಸಂದಾಯಿತ ಷೇರುಗಳ, ಐದು ಲಕ್ಷಗಳಾಗಿ ಭಾಗಿಸಿದ ಐದು ಕೋಟಿ ರೂಪಾಯಿಗಳಾಗಿರತಕ್ಕುದು:

ಪರಂತು, ಕೇಂದ್ರ ಸರ್ಕಾರವು, ರಾಷ್ಟ್ರೀಯ ಬ್ಯಾಂಕು ಮತ್ತು ಪ್ರಾಯೋಜಕ ಬ್ಯಾಂಕಿನೊಂದಿಗೆ ಸಮಾಲೋಚಿಸಿದ ತರುವಾಯ ಅಂಥ ಅಧಿಕೃತ ಬಂಡವಾಳವನ್ನು ಹೆಚ್ಚಿಸಬಹುದು ಅಥವಾ ಕಡಿಮೆ ಮಾಡಬಹುದು; ಆದಾಗ್ಯೂ, ಆ ಅಧಿಕೃತ ಬಂಡವಾಳವನ್ನು ಇಪ್ಪತ್ತೈದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಮಾಡತಕ್ಕುದಲ್ಲ ಮತ್ತು ಎಲ್ಲಾ ಸಂದರ್ಭಗಳಲ್ಲಿ ಷೇರುಗಳು ಪ್ರತಿಯೊಂದೂ ಒಂದು ನೂರು ರೂಪಾಯಿಗಳ ಪೂರ್ಣ ಸಂದಾಯಿತ ಷೇರುಗಳಾಗಿರತಕ್ಕುದು.

**6. ಹೊರಡಿಸಲಾದ ಬಂಡವಾಳ.-** (1) ಪ್ರತಿಯೊಂದು ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಹೊರಡಿಸಲಾದ ಬಂಡವಾಳವು, ಮೊದಲಲ್ಲಿ, ಕೇಂದ್ರ ಸರ್ಕಾರವು ಈ ಬಗ್ಗೆ ನಿಗದಿಪಡಿಸಬಹುದಾದಷ್ಟು ಆಗಿರತಕ್ಕುದು, ಆದರೆ ಅದು ಯಾವುದೇ ಸಂದರ್ಭದಲ್ಲಿ ಇಪ್ಪತ್ತೈದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇರತಕ್ಕುದಲ್ಲ ಅಥವಾ ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಇರತಕ್ಕುದಲ್ಲ.

(2) (1) ನೇ ಉಪ-ಪ್ರಕರಣದ ಮೇರೆಗೆ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಹೊರಡಿಸಿದ ಬಂಡವಾಳದ ಪೈಕಿ ಶೇಕಡಾ ಐವತ್ತರಷ್ಟನ್ನು ಕೇಂದ್ರ ಸರ್ಕಾರ, ಶೇಕಡಾ ಹದಿನೈದರಷ್ಟನ್ನು ಸಂಬಂಧಪಟ್ಟ ರಾಜ್ಯ ಸರ್ಕಾರ ಮತ್ತು ಶೇಕಡಾ ಮೂವತ್ತೈದರಷ್ಟನ್ನು ಪ್ರಾಯೋಜಕ ಬ್ಯಾಂಕ್ ವಂತಿಗೆಯಾಗಿ ಕೊಡತಕ್ಕುದು.

(3) ಮಂಡಳಿಯು, ರಾಷ್ಟ್ರೀಯ ಬ್ಯಾಂಕು ಸಂಬಂಧಪಟ್ಟ ರಾಜ್ಯ ಸರ್ಕಾರ ಮತ್ತು ಪ್ರಾಯೋಜಕ ಬ್ಯಾಂಕಿನೊಂದಿಗೆ ಸಮಾಲೋಚಿಸಿದ ತರುವಾಯ ಮತ್ತು ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಕಾಲಕಾಲಕ್ಕೆ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಹೊರಡಿಸಿದ

ಬಂಡವಾಳವನ್ನು ಹೆಚ್ಚಿಸಬಹುದು ಮತ್ತು ಹೆಚ್ಚುವರಿ ಬಂಡವಾಳವನ್ನು ಹೊರಡಿಸಿದಲ್ಲಿ, ಅಂಥ ಬಂಡವಾಳಕ್ಕೂ ಸಹ (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಅದೇ ಪ್ರಮಾಣದಲ್ಲಿ ವಂತಿಗೆ ಕೊಡತಕ್ಕುದು.

**7. ಷೇರುಗಳು ಅನುಮೋದಿತ ಭದ್ರತೆಗಳಾಗಿರತಕ್ಕುದು.-** ಈ ಪ್ರಕರಣದಲ್ಲಿ, ಇಲ್ಲಿ ಇನ್ನು ಮುಂದೆ ಹೇಳಿರುವ ಅಧಿನಿಯಮಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಷೇರುಗಳನ್ನು, ಭಾರತ ನ್ಯಾಸ ಅಧಿನಿಯಮ, 1882 (1882ರ ಸಂ. 2) ಇದರ 20ನೇ ಪ್ರಕರಣದಲ್ಲಿ ನಮೂದಿಸಿದ ಭದ್ರತೆಗಳಲ್ಲಿ ಒಳಗೊಂಡಿವೆ ಎಂದು ಭಾವಿಸತಕ್ಕುದು ಮತ್ತು ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949 (1949ರ ಸಂ.10)ರ ಉದ್ದೇಶಗಳಿಗಾಗಿ ಅನುಮೋದಿತ ಭದ್ರತೆಗಳು ಎಂದು ಸಹ ಭಾವಿಸತಕ್ಕುದು.

## ಅಧ್ಯಾಯ - III

## ವ್ಯವಸ್ಥಾಪನೆ

**8. ವ್ಯವಸ್ಥಾಪನೆ.-** (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಕಾರ್ಯಕಲಾಪಗಳು ಮತ್ತು ವ್ಯವಹಾರದ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ವ್ಯವಸ್ಥಾಪನೆಯು ನಿರ್ದೇಶಕರ ಮಂಡಳಿಯಲ್ಲಿ ನಿಹಿತವಾಗಿರತಕ್ಕುದು. ಅವರು ಆ ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಚಲಾಯಿಸಬಹುದಾದ ಎಲ್ಲಾ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಅದು ನಿರ್ವಹಿಸಬಹುದಾದ ಎಲ್ಲಾ ಪ್ರಕಾರ್ಯಗಳನ್ನು ನಿರ್ವಹಿಸಬಹುದು.

(2) ತನ್ನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಮಂಡಳಿಯು, ವ್ಯವಹಾರ ತತ್ವಗಳ ಮೇಲೆ ಕಾರ್ಯ ನಿರ್ವಹಿಸತಕ್ಕುದು ಮತ್ತು ಸಾರ್ವಜನಿಕ ಹಿತಾಸಕ್ತಿಗೆ ಯುಕ್ತ ಗಮನ ಕೊಡತಕ್ಕುದು.

**9. ನಿರ್ದೇಶಕರ ಮಂಡಳಿ.-** (1) ನಿರ್ದೇಶಕರ ಮಂಡಳಿಯು, 11ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಅಧ್ಯಕ್ಷ ಮತ್ತು ಈ ಕೆಳಕಂಡ ಇತರ ಸದಸ್ಯರನ್ನು ಒಳಗೊಂಡಿರತಕ್ಕುದು, ಎಂದರೆ,-

(ಎ) ಕೇಂದ್ರ ಸರ್ಕಾರವು ನಾಮ ನಿರ್ದೇಶಿಸಬೇಕಾದ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ರಿಸರ್ವ್‌ಬ್ಯಾಂಕ್, ರಾಷ್ಟ್ರೀಯ ಬ್ಯಾಂಕ್, ಪ್ರಾಯೋಜಕ ಬ್ಯಾಂಕು ಅಥವಾ ಯಾವುದೇ ಇತರ ಬ್ಯಾಂಕಿನ ಅಧಿಕಾರಿಗಳಾಗಿಲ್ಲದ ಇಬ್ಬರು ನಿರ್ದೇಶಕರು;

(ಬಿ) ಆ ಬ್ಯಾಂಕಿನಿಂದ ನಾಮನಿರ್ದೇಶಿತನಾಗಬೇಕಾದ ರಿಸರ್ವ್‌ಬ್ಯಾಂಕಿನ ಅಧಿಕಾರಿಯಾಗಿರುವ ಒಬ್ಬ ನಿರ್ದೇಶಕ;

(ಸಿ) ಆ ಬ್ಯಾಂಕಿನಿಂದ ನಾಮನಿರ್ದೇಶಿತನಾಗಬೇಕಾದ ರಾಷ್ಟ್ರೀಯ ಬ್ಯಾಂಕಿನ ಅಧಿಕಾರಿಯಾಗಿರುವ ಒಬ್ಬ ನಿರ್ದೇಶಕ;

(ಡಿ) ಆ ಬ್ಯಾಂಕಿನಿಂದ ನಾಮನಿರ್ದೇಶಿತರಾಗಬೇಕಾದ ಪ್ರಾಯೋಜಕ ಬ್ಯಾಂಕಿನ ಅಧಿಕಾರಿಗಳಾಗಿರುವ ಇಬ್ಬರು ನಿರ್ದೇಶಕರು;

(ಇ) ಆ ಸರ್ಕಾರದಿಂದ ನಾಮನಿರ್ದೇಶಿತರಾಗಬೇಕಾದ ಸಂಬಂಧಿಸಿದ ರಾಜ್ಯ ಸರ್ಕಾರದ ಅಧಿಕಾರಿಗಳಾಗಿರುವ ಇಬ್ಬರು ನಿರ್ದೇಶಕರು.

(2) ಕೇಂದ್ರ ಸರ್ಕಾರವು ಮಂಡಳಿಯ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಬಹುದು. ಆದಾಗ್ಯೂ, ಒಟ್ಟಿನಲ್ಲಿ ನಿರ್ದೇಶಕರ ಸಂಖ್ಯೆಯು ಹದಿನೈದನ್ನು ಮೀರಕೂಡದು ಮತ್ತು ಅದು

ಹೆಚ್ಚುವರಿ ಸಂಖ್ಯೆಯ ಸದಸ್ಯರನ್ನು ಭರ್ತಿ ಮಾಡಬಹುದಾದಂಥ ರೀತಿಯನ್ನು ಸಹ ನಿಯಮಿಸಬಹುದು.

**10. ನಿರ್ದೇಶಕನ ಪದಾವಧಿ.–** ನಿರ್ದೇಶಕನು (ಅಧ್ಯಕ್ಷನನ್ನು ಹೊರತುಪಡಿಸಿ) ಅವನು ಪದವನ್ನು ವಹಿಸಿಕೊಳ್ಳುವ ದಿನಾಂಕದಿಂದ, ಅವನನ್ನು ನಾಮನಿರ್ದೇಶನವನ್ನು ಮಾಡಿದ ಕಾಲದಲ್ಲಿ, ಅವನನ್ನು ನಾಮನಿರ್ದೇಶನ ಮಾಡುವ ಪ್ರಾಧಿಕಾರವು ನಿರ್ದಿಷ್ಟ ಪಡಿಸಬಹುದಾದಂತೆ ಎರಡು ವರ್ಷಗಳಿಗೆ ಮೀರದಂಥ ಅವಧಿಗಾಗಿ ಪದಧಾರಣ ಮಾಡತಕ್ಕುದು ಮತ್ತು ಸದರಿ ಅವಧಿಯು ಮುಕ್ತಾಯಗೊಂಡ ಮೇಲೆ ಅವನು ಅವನ ಉತ್ತರಾಧಿಕಾರಿಯನ್ನು ನಾಮನಿರ್ದೇಶಿಸುವವರೆಗೆ ಪದಧಾರಣ ಮಾಡುವುದು ಮುಂದುವರಿಯಬಹುದು ಮತ್ತು ಅವನು ಮರುನಾಮ ನಿರ್ದೇಶನಕ್ಕೆ ಸಹ ಅರ್ಹನಾಗಿರತಕ್ಕುದು.

**11. ಅಧ್ಯಕ್ಷ.–** (1) ಪ್ರಾಯೋಜಕ ಬ್ಯಾಂಕ್, ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಅಧ್ಯಕ್ಷನಾಗಿರಲು ಒಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕುದು ಮತ್ತು ಅಂಥ ವ್ಯಕ್ತಿಯು (4)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು ಅಧ್ಯಕ್ಷನಾಗಿ ಪದಧಾರಣ ಮಾಡತಕ್ಕ, ಐದು ವರ್ಷಗಳನ್ನು ಮೀರದ, ಅವಧಿಯನ್ನು ನಿರ್ದಿಷ್ಟಪಡಿಸತಕ್ಕುದು:

ಪರಂತು, ಅಂಥ ವ್ಯಕ್ತಿಯ ಯಾವುದೇ ನೇಮಕವನ್ನು,-

(ಎ) ಅಂಥ ವ್ಯಕ್ತಿಯು ಪ್ರಾಯೋಜಕ ಬ್ಯಾಂಕಿನ ಅಧಿಕಾರಿಯಾಗಿದ್ದರೆ ರಾಷ್ಟ್ರೀಯ ಬ್ಯಾಂಕಿನೊಂದಿಗೆ ಸಮಾಲೋಚಿಸಿದ ತರುವಾಯ ಹೊರತು; ಮತ್ತು

(ಬಿ) ಯಾವುದೇ ಇತರ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದ ಹೊರತು

- ಮಾಡತಕ್ಕುದಲ್ಲ.

(1ಎ) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ,

(ಎ) ಪ್ರಾಯೋಜಕ ಬ್ಯಾಂಕು, (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಅಧ್ಯಕ್ಷನ ಪದದ ಅವಧಿಯನ್ನು ಕೊನೆಗೊಳಿಸುವ ಹಕ್ಕನ್ನು ಹೊಂದಿರತಕ್ಕುದು:

ಪರಂತು, ಯಾವುದೇ ಅಂಥ ಕೊನೆಗೊಳಿಸುವಿಕೆಯನ್ನು,-

(ಎ) ಅಧ್ಯಕ್ಷನು ಪ್ರಾಯೋಜಕ ಬ್ಯಾಂಕಿನ ಅಧಿಕಾರಿಯಾಗಿದ್ದರೆ, ರಾಷ್ಟ್ರೀಯ ಬ್ಯಾಂಕಿನೊಂದಿಗೆ ಸಮಾಲೋಚಿಸಿದ ತರುವಾಯ ಹೊರತು; ಮತ್ತು

(ಬಿ) ಯಾವುದೇ ಇತರ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮೋದನೆಯ ಹೊರತು

- ಮಾಡತಕ್ಕುದಲ್ಲ:

ಮತ್ತೂ ಪರಂತು, ಅಧ್ಯಕ್ಷನು, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ರಿಸರ್ವ್‌ಬ್ಯಾಂಕ್, ರಾಷ್ಟ್ರೀಯ ಬ್ಯಾಂಕ್ ಪ್ರಾಯೋಜಕ ಬ್ಯಾಂಕ್ ಅಥವಾ ಇತರ ಯಾವುದೇ ಬ್ಯಾಂಕಿನ ಅಧಿಕಾರಿಯಾಗಿರದಿದ್ದರೆ, ಬರಹದಲ್ಲಿ ಮೂರು ತಿಂಗಳಿಗೆ ಕಡಿಮೆ ಇಲ್ಲದ ನೋಟೀಸನ್ನು ಅಥವಾ ಅಂಥ ನೋಟೀಸಿಗೆ ಬದಲಾಗಿ ಮೂರು ತಿಂಗಳ ಸಂಬಳ ಮತ್ತು ಭತ್ಯಗಳನ್ನು ಕೊಡತಕ್ಕುದು; ಮತ್ತು

(ಬಿ) ಅಧ್ಯಕ್ಷನು, (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ, ಬರಹದಲ್ಲಿ, ಮೂರು ತಿಂಗಳಿಗೆ

ಕಡಿಮೆ ಇಲ್ಲದ ನೋಟೀಸನ್ನು ಪ್ರಾಯೋಜಕ ಬ್ಯಾಂಕಿಗೆ ಕೊಡುವ ಮೂಲಕ ಅವನ ಪದಕ್ಕೆ ರಾಜೀನಾಮೆ ಕೊಡಲು ಹಕ್ಕುಳ್ಳವನಾಗಿರತಕ್ಕುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಅಧ್ಯಕ್ಷನಾಗಿ ನೇಮಕಗೊಂಡ ವ್ಯಕ್ತಿಯು ಆ ಉಪ-ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ಮೇಲೆ ಮರು ನೇಮಕಾತಿಗೆ ಅರ್ಹನಾಗಿರತಕ್ಕುದು.

(3) ಅಧ್ಯಕ್ಷನು ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಕಾರ್ಯಕಲಾಪಗಳಿಗೆ ಅವನ ಪೂರ್ಣ ಕಾಲವನ್ನು ವಿನಿಯೋಗಿಸತಕ್ಕುದು ಮತ್ತು ಮಂಡಳಿಯ ಅಧೀಕ್ಷಣೆ, ನಿಯಂತ್ರಣ ಮತ್ತು ನಿರ್ದೇಶನಗಳಿಗೊಳಪಟ್ಟು ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಇಡೀ ಕಾರ್ಯಕಲಾಪಗಳ ನಿರ್ವಹಣೆಯನ್ನು ಹೊಂದಿರತಕ್ಕುದು.

(4) ಪ್ರಾಯೋಜಕ ಬ್ಯಾಂಕ್, ಅಧ್ಯಕ್ಷನನ್ನು ಅವನ ಪದದಿಂದ ಯಾವುದೇ ಕಾಲದಲ್ಲಿ ತೆಗೆದುಹಾಕಬಹುದು:

ಪರಂತು, ಅಂಥ ಯಾವುದೇ ತೆಗೆದುಹಾಕುವಿಕೆಯನ್ನು,-

(ಎ) ಅಧ್ಯಕ್ಷನು ಪ್ರಾಯೋಜಕ ಬ್ಯಾಂಕಿನ ಅಧಿಕಾರಿಯಾಗಿದ್ದರೆ, ರಾಷ್ಟ್ರೀಯ ಬ್ಯಾಂಕಿನೊಂದಿಗೆ ಸಮಾಲೋಚಿಸಿದ ತರುವಾಯ ಹೊರತು; ಮತ್ತು

(ಬಿ) ಯಾವುದೇ ಇತರ ಸಂದರ್ಭದಲ್ಲಿ, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದ ಹೊರತು

- ಮಾಡತಕ್ಕುದಲ್ಲ:

ಮತ್ತೂ ಪರಂತು, ಈ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯನ್ನು ಅವನ ಪದದಿಂದ ಅವನನ್ನು ತೆಗೆದುಹಾಕುವುದರ ವಿರುದ್ಧ ಕಾರಣವನ್ನು ತೋರಿಸಲು ಅವಕಾಶವನ್ನು ಕೊಟ್ಟಿದ್ದ ಹೊರತು ತೆಗೆದುಹಾಕತಕ್ಕುದಲ್ಲ.

(5) ಅಧ್ಯಕ್ಷನು, ಪ್ರಾಯೋಜಕ ಬ್ಯಾಂಕ್, ರಾಷ್ಟ್ರೀಯ ಬ್ಯಾಂಕಿನೊಂದಿಗೆ ಸಮಾಲೋಚಿಸಿ ನಿರ್ಧರಿಸಬಹುದಾದಂಥ ಸಂಬಳ ಮತ್ತು ಭತ್ಯಗಳನ್ನು ಸ್ವೀಕರಿಸತಕ್ಕುದು ಮತ್ತು ಅಂಥ ಸೇವಾ ನಿಬಂಧನೆಗಳು ಮತ್ತು ಷರತ್ತುಗಳಿಂದ ನಿಯಂತ್ರಿತನಾಗತಕ್ಕುದು.

(6) ಅಧ್ಯಕ್ಷನು ದುರ್ಬಲತೆಯಿಂದ ಅಥವಾ ಅನ್ಯಥಾ ಅವನ ಕರ್ತವ್ಯಗಳನ್ನು ಕಾರ್ಯಗತಗೊಳಿಸಲು ಅಸಮರ್ಥಗೊಂಡರೆ ಅಥವಾ ಪದವನ್ನು ತೆರವು ಮಾಡುವುದನ್ನು ಒಳಗೊಂಡಿಲ್ಲದ ಸಂದರ್ಭಗಳಲ್ಲಿ, ರಜೆಯ ಮೇಲೆ ಅಥವಾ ಅನ್ಯಥಾ ಗೈರುಹಾಜರಾಗಿದ್ದರೆ ಕೇಂದ್ರ ಸರ್ಕಾರವು ಮೊದಲು ಹೇಳಿದ ಅಧ್ಯಕ್ಷನ ಗೈರುಹಾಜರಿಯ ಅವಧಿಯಲ್ಲಿ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಲು ಬೇರೊಬ್ಬ ವ್ಯಕ್ತಿಯನ್ನು ನೇಮಕ ಮಾಡಬಹುದು.

**12. ಅನರ್ಹತೆಗಳು.-** ಒಬ್ಬ ವ್ಯಕ್ತಿಯು ನಿರ್ದೇಶಕನಾಗಿ ನೇಮಕಗೊಳ್ಳಲು ಅಥವಾ ಸಂದರ್ಭಾನುಸಾರ, ನಾಮ ನಿರ್ದೇಶಿತನಾಗಲು ಮತ್ತು ನಿರ್ದೇಶಕನಾಗಿರುವುದಕ್ಕೆ ಅವನು,-

(ಎ) ನ್ಯಾಯನಿರ್ಣೀತ ದಿವಾಳಿಯಾಗಿದ್ದರೆ ಅಥವಾ ಯಾವುದೇ ಕಾಲದಲ್ಲಿ ಆಗಿದ್ದರೆ ಅಥವಾ ಅವನ ಋಣದ ಸಂದಾಯವನ್ನು ಅಮಾನತ್ತುಗೊಳಿಸಿದ್ದರೆ ಅಥವಾ ಅವನ ಸಾಲಗಾರರೊಂದಿಗೆ ರಾಜಿ ಮಾಡಿಕೊಂಡಿದ್ದರೆ; ಅಥವಾ

(ಬಿ) ಅಸ್ವಸ್ಥಚಿತ್ತದವನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯದಿಂದ ಹಾಗೆಂದು ಘೋಷಿತನಾಗಿದ್ದರೆ; ಅಥವಾ

(ಸಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಪತನವನ್ನು ಒಳಗೊಳ್ಳುವಂಥ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಅಥವಾ ಆಗಿದ್ದಿದ್ದರೆ

– ಅನರ್ಹನಾಗಿರತಕ್ಕುದು.

**13. ನಿರ್ದೇಶಕ ಸ್ಥಾನವು ತೆರವಾಗುವಿಕೆ.–** (1) ನಿರ್ದೇಶಕನು–

(ಎ) 12ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗೆ ಒಳಪಟ್ಟರೆ; ಅಥವಾ

(ಬಿ) ಮಂಡಳಿಯ ಅನುಮತಿ ಇಲ್ಲದೆ ಅದರ ಮೂರು ಕ್ರಮಾನುಗತ ಸಭೆಗಳಿಗಿಂತ ಹೆಚ್ಚಿನ ಸಭೆಗಳಿಗೆ ಗೈರುಹಾಜರಾದರೆ

– ಆ ತರುವಾಯ ಅವನ ಸ್ಥಾನವು ತೆರವಾಗತಕ್ಕುದು.

(2) ಒಬ್ಬ ನಿರ್ದೇಶಕನು ಅವನನ್ನು ನಾಮ ನಿರ್ದೇಶನ ಮಾಡಿದ್ದಂಥ ಪ್ರಾಧಿಕಾರಕ್ಕೆ ಬರಹದಲ್ಲಿ ಆ ಬಗ್ಗೆ ನೋಟೀಸನ್ನು ಕೊಡುವ ಮೂಲಕ ಅವನ ಪದಕ್ಕೆ ರಾಜೀನಾಮೆ ಕೊಡಬಹುದು ಮತ್ತು ಅಂಥ ರಾಜೀನಾಮೆಯನ್ನು ಅಂಗೀಕರಿಸಿದ ಮೇಲೆ ಆ ನಿರ್ದೇಶಕನು ಅವನ ಪದವನ್ನು ತೆರವು ಮಾಡಿರುವುದಾಗಿ ಭಾವಿಸತಕ್ಕುದು.

**14. ಮಂಡಳಿಯ ಸಭೆಗಳು.–** (1) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ನಿರ್ದೇಶಕ ಮಂಡಳಿಯು, ನಿಯಮಿಸಬಹುದಾದಂಥ ಕಾಲದಲ್ಲಿ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕುದು ಮತ್ತು ಅದರ ಸಭೆಗಳಲ್ಲಿ ಕಾರ್ಯಕಲಾಪವನ್ನು ನಡೆಸುವುದಕ್ಕೆ ಅಂಥ ಪ್ರಕ್ರಿಯೆಯ ನಿಯಮಗಳನ್ನು ಪಾಲಿಸತಕ್ಕುದು.

(2) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಅಧ್ಯಕ್ಷನು ಮಂಡಳಿಯ ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕುದು ಮತ್ತು ಅವನ ಗೈರು ಹಾಜರಿಯಲ್ಲಿ ಅಧ್ಯಕ್ಷನು ಸಾಮಾನ್ಯವಾಗಿ ಅಥವಾ ಯಾವುದೇ ನಿರ್ದಿಷ್ಟ ಸಭೆಗೆ ಸಂಬಂಧಪಟ್ಟಂತೆ ಆ ಬಗ್ಗೆ ಅಧಿಕೃತಗೊಳಿಸಬಹುದಾದಂಥ ನಿರ್ದೇಶಕನು ಅಧ್ಯಕ್ಷತೆ ವಹಿಸತಕ್ಕುದು ಮತ್ತು ಅಧ್ಯಕ್ಷ ಮತ್ತು ಹಾಗೆ ಅಧಿಕೃತಗೊಂಡ ನಿರ್ದೇಶಕ ಇವರಿಬ್ಬರ ಗೈರುಹಾಜರಿಯಲ್ಲಿ ಸಭೆಯಲ್ಲಿ ಹಾಜರಿರುವ ನಿರ್ದೇಶಕರು ಅವರಲ್ಲಿ ಒಬ್ಬನನ್ನು ಆ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಆಯ್ಕೆ ಮಾಡತಕ್ಕುದು.

**ವಿವರಣೆ:–** ಈ ಉಪಪ್ರಕರಣದ ಉದ್ದೇಶಗಳಿಗಾಗಿ ಸಭೆಯಿಂದ 'ಗೈರು ಹಾಜರಿ' ಎಂದರೆ ಯಾವುದೇ ಕಾರ್ಯಕಲಾಪ ನಡೆಯುತ್ತಿರುವಂಥ ಸಭೆಯಲ್ಲಿ ಅಥವಾ ಸಭೆಯ ಯಾವುದೇ ಹಂತದಲ್ಲಿ ಯಾವುದೇ ಕಾರಣಕ್ಕಾಗಿಯೇ ಆಗಲಿ ಹಾಜರಾಗದೆ ಇರುವುದು.

(3) ಮಂಡಳಿಯ ಸಭೆಯಲ್ಲಿ ಎಲ್ಲಾ ಪ್ರಶ್ನೆಗಳನ್ನು ಹಾಜರಿರುವ ಮತ್ತು ಮತ ಚಲಾಯಿಸುವ ನಿರ್ದೇಶಕರ ಬಹುಮತದ ಮೂಲಕ ತೀರ್ಮಾನಿಸತಕ್ಕುದು ಮತ್ತು ಸಮಾನ ಮತಗಳ ಸಂದರ್ಭದಲ್ಲಿ ಅಧ್ಯಕ್ಷತೆಯನ್ನು ವಹಿಸಿರುವ ವ್ಯಕ್ತಿಯು ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕುದು.

(4) ಯಾರೇ ನಿರ್ದೇಶಕನು, ಪ್ರತ್ಯಕ್ಷವಾಗಿಯೇ ಆಗಲಿ ಅಥವಾ ಪರೋಕ್ಷವಾಗಿಯೇ ಆಗಲಿ ಯಾವುದೇ ರೀತಿಯಲ್ಲಿ ಕರಾರು, ಸಾಲ, ಏರ್ಪಾಡು ಅಥವಾ ಪ್ರಸ್ತಾವನೆಯಲ್ಲಿ ಹಿತಾಸಕ್ತಿಯನ್ನು ಹೊಂದಿದ್ದರೆ, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಮಾಡಿಕೊಂಡ ಅಥವಾ ಅದರ ಪರವಾಗಿ ಅಥವಾ ಮಾಡಿಕೊಳ್ಳಬೇಕಾಗಿರುವ ಯಾವುದೇ ಕರಾರು, ಸಾಲ, ಏರ್ಪಾಡು ಅಥವಾ ಪ್ರಸ್ತಾವನೆಯ ಚರ್ಚೆಯಲ್ಲಿ ನಿರ್ದೇಶಕನಾಗಿ ಭಾಗವಹಿಸತಕ್ಕುದಲ್ಲ ಅಥವಾ ಅದರ ಬಗ್ಗೆ ಮತದಾನ ಮಾಡತಕ್ಕುದಲ್ಲ ಮತ್ತು ನಿರ್ದೇಶಕನು ಯಾವುದೇ ಅಂಥ ವಿಷಯದಲ್ಲಿ ಹಿತಾಸಕ್ತಿಯನ್ನು ಹೊಂದಿರುವಲ್ಲಿ ಅವನು ಸಾಧ್ಯವಾದಷ್ಟು ಬೇಗನೆ ಅಂಥ ತಕರಾರು, ಸಾಲ, ಏರ್ಪಾಡು ಅಥವಾ ಪ್ರಸ್ತಾವನೆಯಲ್ಲಿ ಅವನ ಹಿತಾಸಕ್ತಿಯ ಸ್ವರೂಪವನ್ನು ಮಂಡಳಿಗೆ ಬಹಿರಂಗ

ಪಡಿಸತಕ್ಕುದು ಮತ್ತು ಅವನು ಹಾಗೆ ಮಾಡುವಲ್ಲಿ, ಸಭೆಯಲ್ಲಿ ಅವನ ಹಾಜರಾತಿಯನ್ನು ಯಾವುದೇ ಅಂಥ ಚರ್ಚೆ ಅಥವಾ ಮತದಾನ ಕಾಲದಲ್ಲಿ ಯಾವುದೇ ಕೋರಂ ಅನ್ನು ರೂಪಿಸುವ ಉದ್ದೇಶಕ್ಕಾಗಿ ಗಣನೆಗೆ ತೆಗೆದುಕೊಳ್ಳತಕ್ಕುದಲ್ಲ ಮತ್ತು ಅವನು ಮತದಾನ ಮಾಡಿದರೆ ಅವನ ಮತವು ಅಸಿಂಧುವಾಗತಕ್ಕುದು:

ಪರಂತು, ಈ ಉಪ- ಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ ಅಂಥ ನಿರ್ದೇಶಕನಿಗೆ, ಅವನು-

(i) ಕಂಪನಿಗಳ ಅಧಿನಿಯಮ, 1956 (1956ರ 1) ಇದರ ಅರ್ಥ ವ್ಯಾಪ್ತಿಯೊಳಗೆ ಯಾವುದೇ ಸಾರ್ವಜನಿಕ ಕಂಪನಿಯಲ್ಲಿ ಅಥವಾ ಭಾರತದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿಸಲಾದ ಯಾವುದೇ ನಿಗಮದಲ್ಲಿ ಅಥವಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಯಾವ ಸಹಕಾರ ಸಂಘದೊಂದಿಗೆ ಯಾವುದೇ ಕರಾರು, ಸಾಲ, ಏರ್ಪಾಡು ಅಥವಾ ಪ್ರಸ್ತಾಪವನ್ನು ಮಾಡಿಕೊಂಡಿರುವುದೋ ಅಥವಾ ಮಾಡಿಕೊಳ್ಳಲು ಉದ್ದೇಶಿಸಿರುವುದೋ ಆ ಯಾವುದೇ ಸಹಕಾರಿ ಸಂಘದಲ್ಲಿ ಶೇಕಡ ಎರಡಕ್ಕಿಂತ ಹೆಚ್ಚಲ್ಲದ ಸಂದಾಯಿತ ಬಂಡವಾಳವನ್ನು ಹೊಂದಿರುವ ಷೇರುದಾರ (ನಿರ್ದೇಶಕರನ್ನು ಹೊರತುಪಡಿಸಿ) ನಾಗಿರುವ; ಅಥವಾ

(ii) ಹಾಗೆಂದು ಅಂಥ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ನಿರ್ದೇಶಕನಾಗಿರುವ

- ಕಾರಣ ಮಾತ್ರದಿಂದಲೇ ಅನ್ವಯವಾಗತಕ್ಕುದಲ್ಲ.

**15. ಮಂಡಳಿಯ ಸಮಿತಿಗಳು.-** ಮಂಡಳಿಯು, ಅದು ತೀರ್ಮಾನಿಸಬಹುದಾದಂಥ ಉದ್ದೇಶಗಳಿಗಾಗಿ, ಅದು ಸೂಕ್ತವೆಂದು ಯೋಚಿಸುವಂಥ, ಪೂರ್ಣವಾಗಿ ನಿರ್ದೇಶಕರನ್ನು ಅಥವಾ ಪೂರ್ಣವಾಗಿ ಇತರ ವ್ಯಕ್ತಿಗಳನ್ನು ಅಥವಾ ಭಾಗಶಃ ನಿರ್ದೇಶಕರುಗಳನ್ನು ಮತ್ತು ಭಾಗಶಃ ಇತರ ವ್ಯಕ್ತಿಗಳನ್ನು ಒಳಗೊಂಡಿರುವ ಸಮಿತಿಗಳನ್ನು ರಚಿಸಬಹುದು.

**16. ಸಮಿತಿಗಳ ನಿರ್ದೇಶಕರು ಮತ್ತು ಸದಸ್ಯರ ಫೀಜು ಮತ್ತು ಭತ್ಯಗಳು.-** (1) ಸಮಿತಿಯ ಪ್ರತಿಯೊಬ್ಬ ನಿರ್ದೇಶಕ ಮತ್ತು ಪ್ರತಿಯೊಬ್ಬ ಸದಸ್ಯನಿಗೆ (ಅಧ್ಯಕ್ಷನನ್ನು ಹೊರತುಪಡಿಸಿ) ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಫೀಜು ಮತ್ತು ಭತ್ಯಗಳನ್ನು ಸಂದಾಯ ಮಾಡತಕ್ಕುದು:

ಪರಂತು, ಯಾವುದೇ ಫೀಜನ್ನು ಸಮಿತಿಯ ಯಾರೇ ನಿರ್ದೇಶಕ ಅಥವಾ ಸದಸ್ಯನಿಗೆ ಅವನು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ರಿಸರ್ವ್‌ಬ್ಯಾಂಕ್, ರಾಷ್ಟ್ರೀಯ ಬ್ಯಾಂಕ್, ಪ್ರಾಯೋಜಕ ಬ್ಯಾಂಕ್ ಅಥವಾ ಯಾವುದೇ ಇತರ ಬ್ಯಾಂಕಿನ ಅಧಿಕಾರಿಯಾಗಿದ್ದರೆ ಸಂದಾಯ ಮಾಡತಕ್ಕುದಲ್ಲ.

(2) ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ರಿಸರ್ವ್‌ಬ್ಯಾಂಕ್, ರಾಷ್ಟ್ರೀಯ ಬ್ಯಾಂಕ್, ಪ್ರಾಯೋಜಕ ಬ್ಯಾಂಕ್ ಅಥವಾ ಯಾವುದೇ ಇತರ ಬ್ಯಾಂಕಿನ ಅಧಿಕಾರಿಯಾಗಿರುವ ಸಮಿತಿಯ ಒಬ್ಬ ನಿರ್ದೇಶಕ ಅಥವಾ ಸದಸ್ಯನಿಗೆ ಸಂದಾಯ ಮಾಡಬೇಕಾದ ಭತ್ಯೆಗಳನ್ನು ಅಂಥ ಅಧಿಕಾರಿಯನ್ನು ನಿಯೋಜಿಸಿಕೊಂಡಿರುವಂಥ ಸರ್ಕಾರ ಅಥವಾ ಬ್ಯಾಂಕು ಸಂದಾಯ ಮಾಡತಕ್ಕುದು; ಮತ್ತು ಸಮಿತಿಯ ಯಾರೇ ಇತರ ನಿರ್ದೇಶಕ ಅಥವಾ ಸದಸ್ಯನಿಗೆ ಸಂದಾಯ ಮಾಡಬೇಕಾದ ಭತ್ಯಗಳು ಮತ್ತು ಫೀಜನ್ನು ಸಂಬಂಧಪಟ್ಟ ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಸಂದಾಯ ಮಾಡತಕ್ಕುದು.

**17. ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಸಿಬ್ಬಂದಿ.-** (1) ಪ್ರಾದೇಶಿಕ ಗ್ರಾಮೀಣ ಬ್ಯಾಂಕ್, ಅದರ ಪ್ರಕಾರ್ಯಗಳನ್ನು ಸಮರ್ಥವಾಗಿ ನೆರವೇರಿಸುವುದಕ್ಕಾಗಿ ನಿಯಮಿಸಬಹುದಾದಂಥ ರೀತಿಯಲ್ಲಿ ಅದು ಅವಶ್ಯ ಅಥವಾ ಅಪೇಕ್ಷಣೀಯವೆಂದು ಪರ್ಯಾಲೋಚಿಸಬಹುದಾದಂಥ ಸಂಖ್ಯೆಯ

ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ನೇಮಕಮಾಡಬಹುದು ಮತ್ತು ಅವರ ನೇಮಕಾತಿ ಮತ್ತು ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳನ್ನು ನಿರ್ಧರಿಸಬಹುದು:

ಪರಂತು, ಪ್ರಾಯೋಜಕ ಬ್ಯಾಂಕಿಗೆ, ಅದು ಪ್ರಾಯೋಜಿಸಿದ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಹಾಗೆ ಮಾಡಲು ಕೋರಿದರೆ, ಅದರ ಪ್ರಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸುವುದಕ್ಕಾಗಿ ಅವಶ್ಯ ಅಥವಾ ಅಪೇಕ್ಷಣೀಯವಾಗಬಹುದಾದಂಥ ಸಂಖ್ಯೆಯ ಅಧಿಕಾರಿಗಳು ಅಥವಾ ಇತರ ನೌಕರರನ್ನು ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ ಪ್ರತಿನಿಯೋಜನೆಯ ಮೇಲೆ ಕಳುಹಿಸುವುದು ಕಾನೂನು ಸಮ್ಮತವಾಗಿರತಕ್ಕುದು:

ಮತ್ತೂ ಪರಂತು, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ನೇಮಕ ಮಾಡಿದ ಅಧಿಕಾರಿಗಳು ಮತ್ತು ಇತರ ನೌಕರರ ಪರಿಶ್ರಮಧನವು ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥದು ಆಗಿರತಕ್ಕುದು, ಮತ್ತು ಅಂಥ ಪರಿಶ್ರಮಧನವನ್ನು ನಿರ್ಧರಿಸುವಲ್ಲಿ ಕೇಂದ್ರ ಸರ್ಕಾರವು, ಅಧಿಸೂಚಿತ ಪ್ರದೇಶದಲ್ಲಿನ ಸಮಾನ ಮಟ್ಟ ಮತ್ತು ಸ್ಥಾನಮಾನದ ರಾಜ್ಯ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳ ನಿಯೋಜಿತರ ಸಂಬಳದ ಸ್ವರೂಪದ ಬಗ್ಗೆ ಯುಕ್ತ ಗಮನವನ್ನು ಕೊಡತಕ್ಕುದು.

(2) ಔದ್ಯಮಿಕ ವಿವಾದಗಳ ಅಧಿನಿಯಮ, 1947 (1947ರ 14) ಇದರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಯಾವುದೇ ಔದ್ಯಮಿಕ ನ್ಯಾಯಾಧಿಕರಣ, ನ್ಯಾಯಾಲಯ ಅಥವಾ ಇತರ ಪ್ರಾಧಿಕಾರವು ನೀಡಿದ ಯಾವುದೇ ಐತೀರ್ಪು, ತೀರ್ಪು, ಡಿಕ್ರಿ, ತೀರ್ಮಾನ ಅಥವಾ ಆದೇಶವು, ಪ್ರಾದೇಶಿಕ ಗ್ರಾಮೀಣ ಬ್ಯಾಂಕು ನೇಮಕ ಮಾಡಿದ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ಆ ನಿಬಂಧನೆ ಮತ್ತು ಷರತ್ತುಗಳಿಗೆ ಅನ್ವಯಿಸತಕ್ಕುದಲ್ಲ.

(3) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಅಧಿಕಾರಿಗಳು ಮತ್ತು ಇತರ ನೌಕರರು ಮಂಡಳಿಯು ಅವರಿಗೆ ವಹಿಸಿಕೊಡಬಹುದಾದ ಅಥವಾ ಪ್ರತ್ಯಾಯೋಜಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕುದು.

## ಅಧ್ಯಾಯ - IV

## ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ವ್ಯವಹಾರಗಳು

**18. ಪ್ರಾದೇಶಿಕ ಗ್ರಾಮೀಣ ಬ್ಯಾಂಕು ನಡೆಸಬಹುದಾದಂಥ ವ್ಯವಹಾರಗಳು.-** (1) ಪ್ರತಿಯೊಂದು ಪ್ರಾದೇಶಿಕ ಗ್ರಾಮೀಣ ಬ್ಯಾಂಕು, ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949 (1949ರ 10) ಇದರ 5ನೇ ಪ್ರಕರಣದ (ಬಿ) ಖಂಡದಲ್ಲಿ ಪರಿಭಾಷಿಸಿದಂತೆ ಬ್ಯಾಂಕಿಂಗ್ ವ್ಯವಹಾರವನ್ನು ನಿರ್ವಹಿಸತಕ್ಕುದು ಮತ್ತು ನಡೆಸತಕ್ಕುದು ಮತ್ತು ಅದು ಆ ಅಧಿನಿಯಮದ 6ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಂದು ಅಥವಾ ಅದಕ್ಕಿಂತ ಹೆಚ್ಚಿನ ರೀತಿಯ ವ್ಯವಹಾರದಲ್ಲಿ ತೊಡಗಬಹುದು.

(2) (1)ನೇ ಉಪಪ್ರಕರಣದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಪ್ರತಿಯೊಂದು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ವಿಶೇಷವಾಗಿ ಈ ಕೆಳಕಂಡ ಬಗೆಗಳ ವ್ಯವಹಾರವನ್ನು ಕೈಗೊಳ್ಳಬಹುದು, ಎಂದರೆ:-

(ಎ) ಕೃಷಿ ಉದ್ದೇಶಗಳು ಅಥವಾ ಕೃಷಿ ಕಾರ್ಯಾಚರಣೆಗಳಿಗಾಗಿ ಅಥವಾ ಅದಕ್ಕೆ ಸಂಬಂಧಪಟ್ಟ ಇತರ ಉದ್ದೇಶಗಳಿಗಾಗಿ ಒಬ್ಬ ವ್ಯಕ್ತಿಗೇ ಆಗಲಿ ಅಥವಾ ಗುಂಪುಗಳಲ್ಲಿಯೇ ಆಗಲಿ, ವಿಶೇಷವಾಗಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಮತ್ತು ಕೃಷಿ ಮಾರುಕಟ್ಟೆ ಸಂಘಗಳು, ಕೃಷಿ ಸಂಸ್ಕರಣ ಸಂಘಗಳು, ಸಹಕಾರಿ ವ್ಯವಸಾಯ ಸಂಘಗಳು, ಪ್ರಾಥಮಿಕ ಕೃಷಿ ಸಾಲ ಸಂಘಗಳು ಅಥವಾ ರೈತರ

ಸೇವಾ ಸಂಘಗಳು ಇವುಗಳನ್ನು ಒಳಗೊಂಡು ಸಹಕಾರ ಸಂಘಗಳಿಗೆ ಸಾಲಗಳು ಮತ್ತು ಮುಂಗಡಗಳನ್ನು ಮಂಜೂರು ಮಾಡುವುದು;

(ಬಿ) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ ಸಂಬಂಧಪಟ್ಟಂತೆ ಅಧಿಸೂಚಿತ ಪ್ರದೇಶದೊಳಗೆ ವ್ಯಾಪಾರ, ವಾಣಿಜ್ಯ ಅಥವಾ ಕೈಗಾರಿಕೆ ಅಥವಾ ಇತರ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುವ ಕುಶಲಕರ್ಮಿಗಳು, ಸಣ್ಣ ಉದ್ಯಮದಾರರು ಮತ್ತು ಸಣ್ಣ ಆದಾಯ ಮೂಲಗಳ ವ್ಯಕ್ತಿಗಳಿಗೆ ವಿಶೇಷವಾಗಿ ಸಾಲಗಳು ಮತ್ತು ಮುಂಗಡಗಳನ್ನು ಮಂಜೂರು ಮಾಡುವುದು.

## ಅಧ್ಯಾಯ - V

## ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**19. ಲೆಕ್ಕ ಪತ್ರಗಳ ಸಮಾಪ್ತಿ.-** (1) ಪ್ರತಿಯೊಂದು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಪ್ರತಿವರ್ಷದ ಡಿಸೆಂಬರಿನ 31ನೇ ದಿವಸದಂದು ಅಥವಾ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಪ್ರತಿವರ್ಷದ ಅಂಥ ದಿನಾಂಕದಂದು ಇರುವಂತೆ ಅದರ ಪುಸ್ತಕಗಳನ್ನು ಸಮಾಪ್ತಿಗೊಳಿಸುವಂತೆ ಮತ್ತು ಸರಿದೂಗಿಸುವಂತೆ ಮಾಡಿಸತಕ್ಕುದು ಮತ್ತು ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ ಅದರ ಲೆಕ್ಕ ಪತ್ರಗಳ ಪರಿಶೋಧನೆಗಾಗಿ ಲೆಕ್ಕ ಪರಿಶೋಧಕರನ್ನು ನೇಮಕ ಮಾಡತಕ್ಕುದು:

ಪರಂತು, ಈ ಉಪಪ್ರಕರಣದ ಮೇರೆಗೆ ಒಂದು ಲೆಕ್ಕದ ಕಾಲಾವಧಿಯನ್ನು ಮತ್ತೊಂದು ಕಾಲಾವಧಿಗೆ ಬದಲಾಯಿಸುವುದಕ್ಕೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ಆಯಾ ವರ್ಷಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ಮುಕ್ತಾಯಗೊಳಿಸುವುದಕ್ಕಾಗಿ ಮತ್ತು ಸರಿದೂಗಿಸುವುದಕ್ಕಾಗಿ ಅಥವಾ ಅವುಗಳಿಗೆ ಸಂಬಂಧಿಸಿದ ಇತರ ವಿಷಯಗಳಿಗಾಗಿ ತಾನು ಅವಶ್ಯವೆಂದು ಅಥವಾ ವಿಹಿತವೆಂದು ಭಾವಿಸುವಂಥ ಉಪಬಂಧಗಳನ್ನು ಮಾಡಬಹುದು.

(2) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಪ್ರತಿಯೊಬ್ಬ ಲೆಕ್ಕಪರಿಶೋಧಕನು, ಕಂಪನಿಗಳ ಅಧಿನಿಯಮ, 1956 (1956ರ 1)ರ 226ನೇ ಪ್ರಕರಣದ ಮೇರೆಗೆ ಕಂಪನಿಯ ಲೆಕ್ಕ ಪರಿಶೋಧಕನೆಂದು ಕೆಲಸ ಮಾಡಲು ಅರ್ಹನಾಗಿರುವ ವ್ಯಕ್ತಿಯಾಗಿರತಕ್ಕುದು ಮತ್ತು ಅವನು ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ನಿಗದಿಪಡಿಸಬಹುದಾದಂಥ ಪರಿಶ್ರಮಧನವನ್ನು ಸ್ವೀಕರಿಸತಕ್ಕುದು.

(3) ಪ್ರತಿಯೊಬ್ಬ ಲೆಕ್ಕಪರಿಶೋಧಕನಿಗೆ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ವಾರ್ಷಿಕ ಆಯವ್ಯಯ ಪಟ್ಟಿ ಮತ್ತು ಲಾಭ ಮತ್ತು ನಷ್ಟದ ಲೆಕ್ಕದ ಪ್ರತಿಯನ್ನು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಇಟ್ಟಿರುವ ಎಲ್ಲಾ ಪುಸ್ತಕಗಳ ಪಟ್ಟಿಯನ್ನು ಒದಗಿಸತಕ್ಕುದು ಮತ್ತು ಆ ಆಯವ್ಯಯ ಪಟ್ಟಿಯನ್ನು ಮತ್ತು ಅದಕ್ಕೆ ಸಂಬಂಧಪಟ್ಟ ವೋಚರುಗಳನ್ನು ಪರಿಶೀಲಿಸುವುದು ಲೆಕ್ಕಪರಿಶೋಧಕನ ಕರ್ತವ್ಯವಾಗಿರತಕ್ಕುದು ಮತ್ತು ಅವನ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಲೆಕ್ಕಪರಿಶೋಧಕನು-

(ಎ) ಎಲ್ಲಾ ಯುಕ್ತ ಕಾಲಗಳಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ನೋಡುವ ಅವಕಾಶವನ್ನು ಹೊಂದಿರತಕ್ಕುದು;

(ಬಿ) ಅಂಥ ಲೆಕ್ಕಪತ್ರಗಳ ತನಿಖೆಯನ್ನು ಮಾಡುವಲ್ಲಿ ಅವನಿಗೆ ಸಹಾಯ ಮಾಡಲು ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ವೆಚ್ಚದಲ್ಲಿ ಲೆಕ್ಕಿಗರು ಅಥವಾ ಇತರ ವ್ಯಕ್ತಿಗಳನ್ನು ನಿಯೋಜಿಸಿಕೊಳ್ಳಬಹುದು; ಮತ್ತು

(ಸಿ) ಅಂಥ ಲೆಕ್ಕಪತ್ರಗಳಿಗೆ ಸಂಬಂಧಪಟ್ಟಂತೆ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಅಧ್ಯಕ್ಷನನ್ನು ಅಥವಾ ಯಾರೇ ಅಧಿಕಾರಿಯನ್ನು ಅಥವಾ ನೌಕರರನ್ನು ಪರೀಕ್ಷಿಸಬಹುದು.

(4) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಪ್ರತಿಯೊಬ್ಬ ಲೆಕ್ಕಪರಿಶೋಧಕನು ವಾರ್ಷಿಕ ಆಯವ್ಯಯ ಪಟ್ಟಿ ಮತ್ತು ಲೆಕ್ಕಪತ್ರಗಳ ಮೇಲೆ ಆ ಬ್ಯಾಂಕಿಗೆ ವರದಿಯನ್ನು ಮಾಡತಕ್ಕುದು ಮತ್ತು ಅಂಥ ಪ್ರತಿಯೊಂದು ವರದಿಯು,-

(ಎ) ಅವನ ಅಭಿಪ್ರಾಯದಲ್ಲಿ, ಆಯವ್ಯಯ ಪಟ್ಟಿಯು, ಎಲ್ಲ ಅವಶ್ಯಕ ವಿವರಗಳನ್ನೊಳಗೊಂಡು, ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ವ್ಯವಹಾರಗಳ ನಿಜವಾದ ಮತ್ತು ಸರಿಯಾದ ಚಿತ್ರವನ್ನು ತೋರಿಸುವ ಹಾಗೆ ಯುಕ್ತವಾಗಿ ತಯಾರಿಸಿದ ಪೂರ್ಣ ಮತ್ತು ಸರಿಯಾದ ಆಯವ್ಯಯ ಪಟ್ಟಿಯಾಗಿದೆಯೇ ಹೇಗೆ ಮತ್ತು ಯಾವುದೇ ವಿವರಣೆ ಅಥವಾ ಮಾಹಿತಿಯನ್ನು ಕೋರಿದ್ದ ಸಂದರ್ಭದಲ್ಲಿ ಅದನ್ನು ಕೊಡಲಾಗಿದೆಯೇ ಮತ್ತು ಅದು ತೃಪ್ತಿಕರವಾಗಿದೆಯೇ ಹೇಗೆ;

(ಬಿ) ಅವನ ಗಮನಕ್ಕೆ ಬಂದಿರುವಂಥ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ವ್ಯವಹಾರಗಳು, ಆ ಬ್ಯಾಂಕಿನ ಅಧಿಕಾರದೊಳಗೆ ಇರುವುದೇ ಅಥವಾ ಇಲ್ಲವೇ ಹೇಗೆ;

(ಸಿ) ಆ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಕಚೇರಿಗಳಿಂದ ಮತ್ತು ಶಾಖೆಗಳಿಂದ ಸ್ವೀಕರಿಸಿದ ವಿವರಪಟ್ಟಿಕೆಗಳು ಅವನ ಲೆಕ್ಕ ಪರಿಶೋಧನೆಯ ಉದ್ದೇಶಕ್ಕಾಗಿ ಸಾಕಷ್ಟಾಗಿವೆಯೆಂದು ಕಂಡುಬಂದಿವೆಯೇ ಅಥವಾ ಇಲ್ಲವೇ ಹೇಗೆ;

(ಡಿ) ಲಾಭ ಮತ್ತು ನಷ್ಟದ ಲೆಕ್ಕವು ಅಂಥ ಲೆಕ್ಕಪತ್ರಗಳು ಒಳಗೊಂಡ ಅವಧಿಗಾಗಿ ಲಾಭ ಅಥವಾ ನಷ್ಟದ ನಿಜವಾದ ಶಿಲ್ಕನ್ನು ತೋರಿಸುವುದೋ ಹೇಗೆ

- ಎಂಬುದನ್ನು; ಮತ್ತು

(ಇ) ಆ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಗಮನಕ್ಕೆ ತರಬೇಕಾದುದು ಎಂದು ಅವನು ಪರ್ಯಾಲೋಚಿಸುವಂಥ ಯಾವುದೇ ಇತರ ವಿಷಯವನ್ನು

- ನಿರೂಪಿಸತಕ್ಕುದು.

**20. ಷೇರುದಾರರಿಗೆ ವಾರ್ಷಿಕ ವರದಿಯನ್ನು ಒದಗಿಸತಕ್ಕುದು.-** (1) ಪ್ರತಿಯೊಂದು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಅದರ ಲೆಕ್ಕದ ವರ್ಷವು ಸಮಾಪ್ತಿಯಾದ ದಿನಾಂಕದಿಂದ ಮೂರು ತಿಂಗಳೊಳಗೆ ಅಥವಾ ರಿಸರ್ವ್ ಬ್ಯಾಂಕ್ ಅನುಮತಿಸಬಹುದಾದಂತೆ ಮೂರು ತಿಂಗಳನ್ನು ಮೀರದಂಥ ಮತ್ತಷ್ಟು ಅವಧಿಯವರೆಗೆ ಅದರ ಪ್ರತಿಯೊಬ್ಬ ಷೇರುದಾರನಿಗೆ ಸದರಿ ಲೆಕ್ಕದ ವರ್ಷಕ್ಕೆ ಸಂಬಂಧಪಟ್ಟಂತೆ ಅದರ ಆಯವ್ಯಯ ಪಟ್ಟಿ, ಲಾಭ ಮತ್ತು ನಷ್ಟದ ಲೆಕ್ಕ ಮತ್ತು ಲೆಕ್ಕ ಪರಿಶೋಧಕನ ವರದಿಯ ಪ್ರತಿಯೊಂದಿಗೆ, ನಿಕಟಪೂರ್ವದ ಲೆಕ್ಕ ವರ್ಷದ ಅವಧಿಯಲ್ಲಿನ ಅದರ ಕಾರ್ಯನಿರ್ವಹಣೆ ಮತ್ತು ಚಟುವಟಿಕೆಗಳ ಬಗ್ಗೆ ವರದಿಯನ್ನು ಕಳುಹಿಸತಕ್ಕುದು.

(2) ಕೇಂದ್ರ ಸರ್ಕಾರವು, ಪ್ರತಿಯೊಂದು ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಲೆಕ್ಕ ಪರಿಶೋಧಕನ ವರದಿ ಮತ್ತು ಕಾರ್ಯನಿರ್ವಹಣೆ ಮತ್ತು ಚಟುವಟಿಕೆಗಳ ವರದಿಯನ್ನು ಅವುಗಳನ್ನು ಸ್ವೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡಿಸತಕ್ಕುದು.

**21. ಲಾಭಗಳ ವಿಲೆ.-** ಪ್ರಾದೇಶಿಕ ಗ್ರಾಮೀಣ ಬ್ಯಾಂಕ್, ವಸೂಲಾಗದ ಮತ್ತು ಅನುಮಾನಾಸ್ಪದ ಸಾಲಗಳು, ಆಸ್ತಿಗಳಲ್ಲಿನ ಇಳಿತ, ಸಿಬ್ಬಂದಿ ಮತ್ತು ಸೇವಾ ನಿವೃತ್ತಿ ನಿಧಿಗಳಿಗೆ ಕೊಟ್ಟ ವಂತಿಗೆಗಳಿಗಾಗಿ ಮತ್ತು ಕಾನೂನಿನ ಮೇರೆಗೆ ಹಣ ಒದಗಿಸುವುದು ಅವಶ್ಯವಾಗಿರುವಂಥ ವ್ಯವಸ್ಥೆಗಾಗಿ ಅಥವಾ ಬ್ಯಾಂಕಿಂಗ್ ಕಂಪನಿಗಳು ಸಾಮಾನ್ಯವಾಗಿ ಹಣ ಒದಗಿಸುವಂಥ ಇತರ

ಎಲ್ಲಾ ವಿಷಯಗಳಿಗೆ ಏರ್ಪಾಟುಗಳನ್ನು ಮಾಡಿದ ತರುವಾಯ, ಅದರ ನಿವ್ವಳ ಲಾಭದಲ್ಲಿ, ಲಾಭಾಂಶವನ್ನು ಘೋಷಿಸಬಹುದು.

**22. ಆದಾಯ ತೆರಿಗೆ ಅಧಿನಿಯಮ, 1961ರ ಉದ್ದೇಶಕ್ಕಾಗಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಸಹಕಾರ ಸಂಘವಾಗಿರುವುದಾಗಿ ಭಾವಿಸತಕ್ಕುದು.-** ಆದಾಯ ತೆರಿಗೆ ಅಧಿನಿಯಮ, 1961 (1961ರ 34)ರ ಅಥವಾ ಆದಾಯ, ಲಾಭ ಅಥವಾ ಗಳಿಕೆಗಳ ಮೇಲಿನ ಯಾವುದೇ ತೆರಿಗೆಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮಿತಿಯ ಉದ್ದೇಶಗಳಿಗಾಗಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕನ್ನು, ಸಹಕಾರ ಸಂಘವಾಗಿರುವುದಾಗಿ ಭಾವಿಸತಕ್ಕುದು.

**23. ಬಡ್ಡಿ ತೆರಿಗೆಯನ್ನು ಸಂದಾಯ ಮಾಡತಕ್ಕುದಲ್ಲ.-** ಬಡ್ಡಿ - ತೆರಿಗೆ ಅಧಿನಿಯಮ, 1974 (1974ರ 45) ರಲ್ಲಿ ಏನೇ ಇದ್ದರೂ, ಯಾವುದೇ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಆ ಅಧಿನಿಯಮದ ಮೇರೆಗೆ ಯಾವುದೇ ತೆರಿಗೆಯನ್ನು ಸಂದಾಯ ಮಾಡಲು ಹೊಣೆಯಾಗಿರತಕ್ಕುದಲ್ಲ.

## ಅಧ್ಯಾಯ - Vಎ

## ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ ಸಮ್ಮಿಲನ

**23ಎ. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಸಮ್ಮಿಲನ.-** (1) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು, ರಾಷ್ಟ್ರೀಯ ಬ್ಯಾಂಕಿನೊಂದಿಗೆ ಸಮಾಲೋಚಿಸಿದ ತರುವಾಯ, ಸಂಬಂಧಿಸಿದ ರಾಜ್ಯ ಸರ್ಕಾರ ಮತ್ತು ಪ್ರಾಯೋಜಕ ಬ್ಯಾಂಕ್, ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ಯಾವುದೇ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಸೇವೆ ಸಲ್ಲಿಸುತ್ತಿರುವ ಪ್ರದೇಶದ ಅಭಿವೃದ್ಧಿಯ ಹಿತದೃಷ್ಟಿಯಿಂದ ಅಥವಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ತಮ್ಮದೇ ಆದ ಹಿತದೃಷ್ಟಿಯಿಂದ, ಎರಡು ಅಥವಾ ಹೆಚ್ಚು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಸಮ್ಮಿಲನಗೊಳಿಸತಕ್ಕುದೆಂದು ಅಭಿಪ್ರಾಯಪಟ್ಟರೆ, ಆ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಥ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳನ್ನು (ಇಲ್ಲಿ ಇನ್ನು ಮುಂದೆ ಈ ಅಧ್ಯಾಯದಲ್ಲಿ ವರ್ಗಾವಣೆಕಾರ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳೆಂದು ಉಲ್ಲೇಖಿಸಲಾಗಿದೆ) ಅಂಥ ರಚನೆ, ಸ್ವತ್ತು, ಅಧಿಕಾರಗಳು, ಹಕ್ಕುಗಳು, ಹಿತಾಸಕ್ತಿಗಳು, ಅಧಿಕಾರಗಳು ಮತ್ತು ವಿಶೇಷಾಧಿಕಾರಗಳೊಂದಿಗೆ ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹೊಣೆಗಾರಿಕೆಗಳು, ಕರ್ತವ್ಯಗಳು ಮತ್ತು ಬಾಧ್ಯತೆಗಳೊಂದಿಗೆ ಒಂದೇ ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಆಗಿ (ಇಲ್ಲಿ ಇನ್ನು ಮುಂದೆ ಈ ಅಧ್ಯಾಯದಲ್ಲಿ ವರ್ಗಾವಣೆ ಪಡೆದ ಪ್ರಾದೇಶಿಕ ಗ್ರಾಮೀಣ ಬ್ಯಾಂಕೆಂದು ಉಲ್ಲೇಖಿಸಲಾಗಿದೆ) ಸಮ್ಮಿಲನಗೊಳಿಸುವುದಕ್ಕಾಗಿ ಉಪಬಂಧಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯು ಅಂಥ ಸಮ್ಮಿಲನವು ಜಾರಿಗೆ ಬರುವಂಥ ದಿನಾಂಕವನ್ನು ಸೂಚಿಸತಕ್ಕುದು.

(3) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯು ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಸಹ ಉಪಬಂಧಿಸಬಹುದು, ಎಂದರೆ:-

(ಎ) ವರ್ಗಾವಣೆಕಾರ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಎಲ್ಲ ನೌಕರರು (ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರ ಅರ್ಥ ವ್ಯಾಪ್ತಿಯೊಳಗೆ ಕಾರ್ಮಿಕನಾಗಿಲ್ಲದವರನ್ನು ಹೊರತುಪಡಿಸಿ ಅಧಿಸೂಚನೆಯಲ್ಲಿ ನಿರ್ದಿಷ್ಟವಾಗಿ ನಮೂದಿಸಲಾಗಿದೆ) ವರ್ಗಾವಣೆ ಪಡೆದ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನಲ್ಲಿ ಅಂಥ

ಸಮ್ಮಿಲನವು ಜಾರಿಗೊಂಡ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅವರು ಪಡೆಯುತ್ತಿದ್ದ ಅಥವಾ ಸಂದರ್ಭಾನುಸಾರ, ಅವರು ನಿಯಂತ್ರಣಕ್ಕೊಳಪಡುತ್ತಿದ್ದಂಥ ಅವೇ ಪರಿಶ್ರಮಧನ ಮತ್ತು ಅವೇ ನಿಬಂಧನೆಗಳು ಮತ್ತು ಸೇವಾ ಷರತ್ತುಗಳ ಮೇಲೆ ಸೇವೆಯಲ್ಲಿ ಮುಂದುವರೆಯುವುದು;

(ಬಿ) (ಎ) ಖಂಡದಲ್ಲಿ ಏನೇ ಇದ್ದರೂ, ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರ ಅರ್ಥವ್ಯಾಪ್ತಿಯೊಳಗೆ ಕಾರ್ಮಿಕನಾಗಿಲ್ಲದ ವರ್ಗಾವಣೆಕಾರ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಯಾರೇ ನೌಕರರು ಅಧಿಸೂಚನೆಯಲ್ಲಿ ನಿರ್ದಿಷ್ಟವಾಗಿ ನಮೂದಿಸಿದ್ದರೆ, ಅಥವಾ ವರ್ಗಾವಣೆಕಾರ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಯಾರೇ ನೌಕರರು ಅಂಥ ಸಮ್ಮಿಲನವನ್ನು ಜಾರಿಗೊಳಿಸಿದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯ ಮುಕ್ತಾಯಕ್ಕೆ ಮುಂಚೆ ಯಾವುದೇ ಕಾಲದಲ್ಲಿ ವರ್ಗಾವಣೆ ಪಡೆದ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ ಕೊಟ್ಟ ಬರಹದಲ್ಲಿನ ನೋಟೀಸಿನ ಮೂಲಕ, ವರ್ಗಾವಣೆ ಪಡೆದ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ನೌಕರನಾಗದಿರುವ ಅವನ ಉದ್ದೇಶವನ್ನು ತಿಳಿಸಲಾಗಿರುವಲ್ಲಿ, ಅಂಥ ನೌಕರರ ವೇತನ, ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ ಮೇರೆಗೆ ಅವನು ಹಕ್ಕುಳ್ಳವನಾಗಿರುವ ನಷ್ಟ ಪರಿಹಾರ ಯಾವುದಾದರೂ ಇದ್ದರೆ ಅದು, ಮತ್ತು ಆ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಸಂಬಂಧಿಸಿದ ವರ್ಗಾವಣೆಕಾರ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಆ ನಿಯಮಗಳ ಅಥವಾ ಪ್ರಾಧಿಕಾರದ ಮೇರೆಗೆ ಅವನಿಗೆ ಸಾಮಾನ್ಯವಾಗಿ ಅಂಗೀಕಾರಾರ್ಹವಾಗಿರುವಂಥ ಉಪದಾನ, ಭವಿಷ್ಯ ನಿಧಿ ಮತ್ತು ಇತರ ನಿವೃತ್ತಿ ಲಾಭಗಳು

(ಸಿ) ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಸಮ್ಮಿಲನಗೊಳಿಸುವುದಕ್ಕಾಗಿ ಇತರ ನಿಬಂಧನೆ ಮತ್ತು ಷರತ್ತುಗಳು; ಮತ್ತು

(ಡಿ) ವರ್ಗಾವಣೆ ಪಡೆದ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನಿಂದ ಅಥವಾ ಅದರ ವಿರುದ್ಧ ಅಥವಾ ವರ್ಗಾವಣೆಕಾರ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನಿಂದ ಅಥವಾ ಅದರ ವಿರುದ್ಧ ಯಾವುದೇ ಇತ್ಯರ್ಥದಲ್ಲಿರುವ ಕಾನೂನು ವ್ಯವಹರಣೆಗಳ ಮುಂದುವರಿಕೆ ಮತ್ತು ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಸಮ್ಮಿಲನವನ್ನು ಜಾರಿಗೊಳಿಸಲು ಅವಶ್ಯಕವಾಗಬಹುದಾದಂಥ ಆನುಷಂಗಿಕವಾದ, ಪ್ರಾಸಂಗಿಕವಾದ ಮತ್ತು ಪೂರಕವಾದ ಉಪಬಂಧಗಳು.

(4) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕುದು.

**23ಬಿ. 23ಎ ಪ್ರಕರಣದ ಮೇರೆಗಿನ ಅಧಿಸೂಚನೆಯು ಸಂಬಂಧಿಸಿದ ಪಕ್ಷಕಾರರಿಗೆ ಸಾಕಷ್ಟು ತಿಳಿವಳಿಕೆಯಾಗಿರತಕ್ಕುದು.-** (1) 23ಎ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯು ಸಂಬಂಧಿಸಿದ ಎಲ್ಲ ಪಕ್ಷಕಾರರಿಗೆ ಅದರ ಉಪಬಂಧಗಳ ಬಗ್ಗೆ ಸಾಕಷ್ಟು ತಿಳಿವಳಿಕೆಯಾಗಿರತಕ್ಕುದು ಮತ್ತು ಅದು ವರ್ಗಾವಣೆಕಾರ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ವರ್ಗಾವಣೆ ಪಡೆದ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಮತ್ತು ಠೇವಣಿದಾರರು, ಸಾಲಗಾರರು, ನೌಕರರು ಮತ್ತು ಅಂಥ ಬ್ಯಾಂಕುಗಳೊಂದಿಗೆ ವ್ಯವಹಾರಗಳನ್ನು ಹೊಂದಿರುವ ಇತರ ಎಲ್ಲ ವ್ಯಕ್ತಿಗಳಿಗೆ ಬಂಧನಕಾರಿಯಾಗಿರತಕ್ಕುದು.

(2) ಸ್ವತ್ತು ವರ್ಗಾವಣೆ ಅಧಿನಿಯಮ, 1882 (1882ರ 4) ಅಥವಾ ನೋಂದಣಿ ಅಧಿನಿಯಮ, 1908 (1908ರ 16)ರಲ್ಲಿ ಏನೇ ಅಡಕವಾಗಿದ್ದಾಗ್ಯೂ, 23ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ಅಧಿಸೂಚನೆಯು, ಆ ಅಧಿಸೂಚನೆಯ

ಉಪಬಂಧಗಳು, ವರ್ಗಾವಣೆಕಾರ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಂದ ವರ್ಗಾವಣೆ ಪಡೆದ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ ಯಾವುದೇ ಸ್ವರೂಪದ ವ್ಯವಹಾರ, ಸ್ವತ್ತುಗಳು, ಆಸ್ತಿಗಳು, ಹೊಣೆಗಳು, ಹಕ್ಕುಗಳು, ಹಿತಾಸಕ್ತಿಗಳು, ಅಧಿಕಾರಗಳು, ವಿಶೇಷಾಧಿಕಾರಗಳು, ಲಾಭಗಳು ಮತ್ತು ಹೊಣೆಗಾರಿಕೆಗಳಿಗೆ ಅನುಸಾರವಾಗಿ ಸಾಕಷ್ಟು ಹಸ್ತಾಂತರಣವಾಗಿರತಕ್ಕುದು.

(3) 23ಎ ಪ್ರಕರಣದ ಮೇರೆಗೆ ಸಮ್ಮಿಲನವನ್ನು ಜಾರಿಗೊಳಿಸಿದಂಥ ದಿನಾಂಕದಂದು ಮತ್ತು ಅಂದಿನಿಂದ ಯಾವುದೇ ಒಪ್ಪಂದ, ಹಸ್ತಾಂತರಣ, ವಿಮೆ, ಮುಖ್ತ್ಯಾರನಾಮೆ ಅಥವಾ ಯಾವುದೇ ಸ್ವರೂಪದ ಯಾವುದೇ ಇತರ ದಸ್ತಾವೇಜಿನಲ್ಲಿ ವರ್ಗಾವಣೆಕಾರ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ ಮಾಡಿದ ಯಾವುದೇ ಉಲ್ಲೇಖವನ್ನು ವರ್ಗಾವಣೆ ಪಡೆದ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ ಮಾಡಿದ ಉಲ್ಲೇಖವೆಂಬುದಾಗಿ ಭಾವಿಸತಕ್ಕುದು ಮತ್ತು ವರ್ಗಾವಣೆಕಾರ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಹಕ್ಕುಗಳು ಮತ್ತು ಹೊಣೆಗಳನ್ನು ಸದರಿ ಸಮ್ಮಿಲನದಲ್ಲಿ ನಿರ್ದಿಷ್ಟಪಡಿಸಿದ ಮಟ್ಟಿಗೆ ವರ್ಗಾವಣೆ ಪಡೆದ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಹಕ್ಕುಗಳು ಮತ್ತು ಹೊಣೆಗಳೆಂಬುದಾಗಿ ಭಾವಿಸತಕ್ಕುದು.

**23ಸಿ. ವರ್ಗಾವಣೆಕಾರ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ವ್ಯವಹಾರದ ಸಮಾಪ್ತಿ.–** 23ಎ ಪ್ರಕರಣದ ಮೇರೆಗೆ ಸಮ್ಮಿಲನವನ್ನು ಜಾರಿಗೊಳಿಸಿದಂಥ ದಿನಾಂಕದಂದು ಮತ್ತು ಅಂದಿನಿಂದ ವರ್ಗಾವಣೆಕಾರ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಸದರಿ ಸಮ್ಮಿಲನದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ಅವಶ್ಯವಾಗಬಹುದಾದ ಮಟ್ಟಿಗೆ ಹೊರತು, ಯಾರೇ ಠೇವಣಿದಾರರಿಗೆ ಯಾವುದೇ ಸಂದಾಯ ಮಾಡುವುದನ್ನು ಅಥವಾ ಸಾಲಗಾರರಿಗೆ ಯಾವುದೇ ಹೊಣೆಗಾರಿಕೆ ಅಥವಾ ಬಾಧ್ಯತೆಯನ್ನು ವಿಮೋಚನೆಗೊಳಿಸುವುದನ್ನು ಒಳಗೊಂಡಂತೆ ಯಾವುದೇ ವ್ಯವಹಾರವನ್ನು ನಡೆಸುವುದನ್ನು ಸಮಾಪ್ತಿಗೊಳಿಸತಕ್ಕುದು.

**23ಡಿ. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಸಮಾಪನ.–** 23ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಸಮ್ಮಿಲನಕ್ಕಾಗಿ ಅಧಿಸೂಚನೆಯನ್ನು ಹೊರಡಿಸಲಾಗಿರುವಲ್ಲಿ, ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಹೆಚ್ಚಿನ ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಸಮ್ಮಿಲನದ ಕಾರಣದಿಂದಾಗಿ ವರ್ಗಾವಣೆಕಾರ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಕಾರ್ಯ ನಿರ್ವಹಿಸುವುದು ನಿಂತುಹೋಗತಕ್ಕುದು ಎಂದು ನಿರ್ದೇಶಿಸಿದರೆ ಅದು ವಿಘಟಿತವಾಗತಕ್ಕುದು ಮತ್ತು ಅಂಥ ನಿರ್ದೇಶನವು 26ನೇ ಪ್ರಕರಣದಲ್ಲಿ ಅದಕ್ಕೆ ವಿರುದ್ಧವಾದುದು ಏನೇ ಅಡಕವಾಗಿದ್ದಾಗ್ಯೂ ಪರಿಣಾಮಕಾರಿಯಾಗಿರತಕ್ಕುದು.

## ಅಧ್ಯಾಯ – VI

### ಸಂಕೀರ್ಣ

**24. ನಿರ್ದೇಶನಗಳನ್ನು ಕೊಡಲು ಕೇಂದ್ರ ಸರ್ಕಾರದ ಅಧಿಕಾರ.–** (1) ಪ್ರಾದೇಶಿಕ ಗ್ರಾಮೀಣ ಬ್ಯಾಂಕ್, ಅದರ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಳ್ಳುವ ಕಾರ್ಯನೀತಿಗೆ ಸಂಬಂಧಿಸಿದ ಬಗ್ಗೆ ಕೇಂದ್ರ ಸರ್ಕಾರವು ರಿಸರ್ವ್‌ಬ್ಯಾಂಕಿನೊಂದಿಗೆ ಸಮಾಲೋಚಿಸಿದ ತರುವಾಯ ಕೊಡುವಂಥ ನಿರ್ದೇಶನಗಳಿಂದ ಮಾರ್ಗದರ್ಶನ ಪಡೆಯತಕ್ಕುದು.

(2) ಅಂಥ ಯಾವುದೇ ನಿರ್ದೇಶನವು ಸಾರ್ವಜನಿಕ ಹಿತಾಸಕ್ತಿಯನ್ನೊಳಗೊಂಡ ಕಾರ್ಯನೀತಿಗೆ ಸಂಬಂಧಪಟ್ಟಿದೆಯೋ ಹೇಗೆ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಅದರ ಮೇಲೆ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕುದು.

**24ಎ. ಪ್ರಾಯೋಜಕ ಬ್ಯಾಂಕಿನಿಂದ ಪರಿಶೀಲನೆ, ಲೆಕ್ಕ ಪರಿಶೋಧನೆ ಮತ್ತು ಪರಿಶೋಧನೆ.–** 19ನೇ ಪ್ರಕರಣದಲ್ಲಿ ಏನೇ ಇದ್ದರೂ ಮತ್ತು ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949 (1949ರ 10)ರ 35ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಪ್ರಾಯೋಜಕ ಬ್ಯಾಂಕು, ಕಾಲಕಾಲಕ್ಕೆ, ಅದು ಪ್ರಾಯೋಜಿಸಿದ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಪ್ರಗತಿಯನ್ನು ಮೇಲ್ವಿಚಾರಣೆ ಮಾಡತಕ್ಕುದು ಮತ್ತು ಅದರ ಒಬ್ಬ ಅಥವಾ ಅದಕ್ಕಿಂತ ಹೆಚ್ಚು ಅಧಿಕಾರಿಗಳಿಂದ ಪರಿಶೀಲನೆ, ಆಂತರಿಕ ಲೆಕ್ಕ ಪರಿಶೋಧನೆ ಮತ್ತು ಪರಿಶೋಧನೆಯನ್ನು ಮಾಡಿಸತಕ್ಕುದು ಮತ್ತು ಅಂಥ ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಕೈಗೊಳ್ಳಬೇಕಾದ ಸುಧಾರಕ ಕ್ರಮಗಳನ್ನು ಸೂಚಿಸತಕ್ಕುದು.

**25. ನಂಬಿಕೆ ಮತ್ತು ರಹಸ್ಯತೆಯ ಬಗ್ಗೆ ಬಾಧ್ಯತೆಗಳು.–**(1) ಪ್ರಾದೇಶಿಕ ಗ್ರಾಮೀಣ ಬ್ಯಾಂಕು, ಕಾನೂನಿನ ಮೂಲಕ ಅನ್ಯಥಾ ಅಗತ್ಯಪಡಿಸಿದ ಹೊರತು, ಬ್ಯಾಂಕರುಗಳಲ್ಲಿನ ರೂಢಿಗತ ಪದ್ಧತಿ ಮತ್ತು ಆಚರಣೆಗಳನ್ನು ಪಾಲಿಸತಕ್ಕುದು ಮತ್ತು ವಿಶೇಷವಾಗಿ ಅದು ಕಾನೂನು ಅಥವಾ ಬ್ಯಾಂಕರುಗಳಲ್ಲಿನ ರೂಢಿಗತ ಪದ್ಧತಿ ಮತ್ತು ಆಚರಣೆಗೆ ಅನುಸಾರವಾಗಿ ಇರುವಂಥ ಸಂದರ್ಭಗಳಲ್ಲಿ ಆ ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಬಹಿರಂಗಪಡಿಸುವುದು ಅವಶ್ಯ ಅಥವಾ ಯುಕ್ತವಾದುದನ್ನು ಹೊರತುಪಡಿಸಿ, ಅದರ ಗ್ರಾಹಕರಿಗೆ ಅಥವಾ ಅವರ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಯಾವುದೇ ಮಾಹಿತಿಯನ್ನು ಅದು ಬಹಿರಂಗಪಡಿಸತಕ್ಕುದಲ್ಲ.

(2) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಪ್ರತಿಯೊಬ್ಬ ನಿರ್ದೇಶಕ, ಸಮಿತಿಯ ಸದಸ್ಯ ಅಥವಾ ಲೆಕ್ಕಪರಿಶೋಧಕ ಅಧಿಕಾರಿ ಅಥವಾ ಇತರ ನಿಯೋಜಿತನು ಅವನ ಕರ್ತವ್ಯಗಳನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ಈ ಅಧಿನಿಯಮದ ಅನುಸೂಚಿಯಲ್ಲಿ ತೋರಿಸಿರುವ ನಮೂನೆಯಲ್ಲಿ ನಂಬಿಕೆ ಮತ್ತು ರಹಸ್ಯದ ಘೋಷಣೆಯನ್ನು ಮಾಡತಕ್ಕುದು.

**26. ಪ್ರಾದೇಶಿಕ ಗ್ರಾಮೀಣ ಬ್ಯಾಂಕನ್ನು ಸಮಾಪನಗೊಳಿಸಲು ಪ್ರತಿಷೇಧ.–** ಕಂಪನಿಗಳನ್ನು ಪರಿಸಮಾಪನಗೊಳಿಸುವುದಕ್ಕೆ ಸಂಬಂಧಪಟ್ಟ ಕಾನೂನಿನ ಯಾವುದೇ ಉಪಬಂಧವು ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ ಅನ್ವಯವಾಗತಕ್ಕುದಲ್ಲ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕನ್ನು, ಕೇಂದ್ರ ಸರ್ಕಾರದ ಆದೇಶದ ಮೂಲಕ ಮತ್ತು ಅದು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಹೊರತು ಸಮಾಪನಕ್ಕೆ ಒಳಪಡಿಸತಕ್ಕುದಲ್ಲ.

**27. ನೇಮಕಾತಿ ಅಥವಾ ರಚನೆಯಲ್ಲಿನ ದೋಷಗಳು, ಕಾರ್ಯಗಳನ್ನು ಅಥವಾ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕುದಲ್ಲ.–** (1) ಸದ್ಭಾವನೆಯಿಂದ ಕಾರ್ಯನಿರ್ವಹಿಸುವಾಗ, ಅಧ್ಯಕ್ಷನ ಯಾವುದೇ ಕಾರ್ಯವು ಅವನ ನೇಮಕಾತಿಯಲ್ಲಿ ಅಥವಾ ಪ್ರಕ್ರಿಯೆಯಲ್ಲಿನ ಯಾವುದೇ ದೋಷದ ಕಾರಣಮಾತ್ರದಿಂದಲೇ ಅಸಿಂಧುವಾಗತಕ್ಕುದಲ್ಲ.

(2) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ನಿರ್ದೇಶಕರ ಯಾವುದೇ ಮಂಡಳಿಯ ಅಥವಾ ಯಾವುದೇ ಸಮಿತಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯು, ಸಂದರ್ಭಾನುಸಾರ ಅಂಥ ಮಂಡಳಿಯ ಅಥವಾ ಸಮಿತಿಯಲ್ಲಿನ ಯಾವುದೇ ಖಾಲಿ ಸ್ಥಾನ ಅಥವಾ ಅದರ ರಚನೆಯಲ್ಲಿನ ದೋಷದ ಕಾರಣಮಾತ್ರದಿಂದಲೇ ಅಸಿಂಧುವಾಗತಕ್ಕುದಲ್ಲ.

(3) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ನಿರ್ದೇಶಕನಾಗಿ ಅಥವಾ ಸಮಿತಿಯ ಸದಸ್ಯನಾಗಿ ಸದ್ಭಾವನೆಯಿಂದ ಕಾರ್ಯನಿರ್ವಹಿಸುವ ವ್ಯಕ್ತಿಯು ಮಾಡಿದ ಕಾರ್ಯಗಳು, ಯಾವುದೇ ದೋಷ ಅಥವಾ ಅನರ್ಹತೆಯ ಕಾರಣದಿಂದಾಗಿ ಅವನ ನೇಮಕಾತಿಯು ಅಸಿಂಧುವಾಗಿತ್ತು ಎಂದು ಆ ತರುವಾಯ ಕಂಡುಬರಬಹುದಾಗಿದ್ದಾಗ್ಯೂ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಡಕವಾದ ಯಾವುದೇ ಉಪಬಂಧದ ಕಾರಣದಿಂದಾಗಿ ನೇಮಕಾತಿಯನ್ನು ಕೊನೆಗೊಳಿಸಿದ್ದಾಗ್ಯೂ, ಸಿಂಧುವಾಗಿರತಕ್ಕುದು:

ಪರಂತು, ಈ ಪ್ರಕರಣದಲ್ಲಿ ಇರುವುದು ಯಾವುದೂ, ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ ಅವನ ನಿಯೋಜನೆಯು ಅಸಿಂಧುವಾಗಿರುವುದಾಗಿ ಅಥವಾ ಅದನ್ನು ಕೊನೆಗೊಳಿಸಿರುವುದಾಗಿ ತೋರಿಸಲಾದ ತರುವಾಯ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ನಿರ್ದೇಶಕ ಅಥವಾ ಸಮಿತಿಯ ಸದಸ್ಯನು ಮಾಡಿದ ಯಾವುದೇ ಕಾರ್ಯಕ್ಕೆ ಸಿಂಧುತ್ವವನ್ನು ಕೊಡುವುದೆಂದು ಭಾವಿಸತಕ್ಕುದಲ್ಲ.

**28. ನಿರ್ದೇಶಕರ ಬಗ್ಗೆ ನಷ್ಟ ಭರ್ತಿ, ಇತ್ಯಾದಿ.-** (1) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ನಿರ್ದೇಶಕ ಅಥವಾ ಸಮಿತಿಯ ಸದಸ್ಯನು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಆರ್ಜಿಸಿದ ಅಥವಾ ಅದರ ಪರವಾಗಿ ತೆಗೆದುಕೊಂಡ ಯಾವುದೇ ಸ್ವತ್ತು ಅಥವಾ ಭದ್ರತೆಯ ಮೌಲ್ಯ ಅಥವಾ ಅದರ ಸ್ವಾಮ್ಯವು ಸಾಕಷ್ಟಿಲ್ಲದಿರುವಿಕೆಯಿಂದಾಗಿ ಅಥವಾ ಕೊರತೆಯಿಂದಾಗಿ ಅಥವಾ ಯಾರೇ ಗ್ರಾಹಕ ಅಥವಾ ಸಾಲಗಾರನ ದಿವಾಳಿತನ ಅಥವಾ ಅಕ್ರಮ ಕಾರ್ಯದಿಂದಾಗಿ, ಅಥವಾ ಅವನ ಪದದ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಮಾಡಿದ ಯಾವುದೇ ಕಾರ್ಯದಿಂದಾಗಿ, ಅಂಥ ಬ್ಯಾಂಕಿಗೆ ಉಂಟಾದ ಯಾವುದೇ ನಷ್ಟ ಅಥವಾ ವೆಚ್ಚಕ್ಕೆ, ಅಂಥ ನಷ್ಟ, ವೆಚ್ಚ ಸಾಕಷ್ಟಿಲ್ಲದಿರುವಿಕೆ ಅಥವಾ ಕೊರತೆಯು ಅಂಥ ನಿರ್ದೇಶಕ ಅಥವಾ ಸದಸ್ಯನಿಂದ ಉಂಟಾದ ಉದ್ದೇಶ ಪೂರ್ವಕ ಕಾರ್ಯ ಅಥವಾ ತಪ್ಪಿತದಿಂದಾಗಿದ್ದ ಹೊರತು ಜವಾಬ್ದಾರನಾಗಿರತಕ್ಕುದಲ್ಲ.

(2) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಅಧ್ಯಕ್ಷ ಮತ್ತು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಪ್ರತಿಯೊಬ್ಬ ಅಧಿಕಾರಿ ಅಥವಾ ರಿಸರ್ವ್‌ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕ್ ಅಥವಾ ಪ್ರಾಯೋಜಕ ಬ್ಯಾಂಕಿನ ಅಧಿಕಾರಿ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಪ್ರತಿಯೊಬ್ಬ ಅಧಿಕಾರಿ ಅಥವಾ ಇತರ ನೌಕರನಿಗೆ ಅವನದೇ ಆದ ಉದ್ದೇಶಪೂರ್ವಕ ಕಾರ್ಯ ಅಥವಾ ತಪ್ಪಿತದಿಂದಾಗಿ ಉಂಟಾಗಿರುವಂಥದನ್ನು ಹೊರತುಪಡಿಸಿ ಅವನ ಕರ್ತವ್ಯಗಳ ನಿರ್ವಹಣೆಯಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ, ಅವನು ವಹಿಸಿದ ಎಲ್ಲಾ ನಷ್ಟಗಳು ಮತ್ತು ವೆಚ್ಚಗಳ ಬಗ್ಗೆ ಅಂಥ ಬ್ಯಾಂಕು ನಷ್ಟಭರ್ತಿ ಮಾಡಿಕೊಡತಕ್ಕುದು.

**29. ನಿಯಮ ರಚನಾಧಿಕಾರ.-** (1) ಕೇಂದ್ರ ಸರ್ಕಾರವು, ರಾಷ್ಟ್ರೀಯ ಬ್ಯಾಂಕ್ ಮತ್ತು ಪ್ರಾಯೋಜಕ ಬ್ಯಾಂಕಿನೊಂದಿಗೆ ಸಮಾಲೋಚಿಸಿದ ತರುವಾಯ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:-

(ಎ) 9ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಮಂಡಳಿಯ ಹೆಚ್ಚುವರಿ ಸಂಖ್ಯೆಯ ಸದಸ್ಯರನ್ನು ಭರ್ತಿ ಮಾಡಬಹುದಾದಂಥ ರೀತಿ;

(ಬಿ) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ನಿರ್ದೇಶಕರ ಮಂಡಳಿಯು ಸಭೆ ಸೇರತಕ್ಕಂಥ ಕಾಲ ಮತ್ತು ಸ್ಥಳ ಮತ್ತು 14ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಅದರ ಸಭೆಗಳಲ್ಲಿ ಕಾರ್ಯಕಲಾಪವನ್ನು ನಡೆಸುವುದರ ಬಗ್ಗೆ ಆ ಮಂಡಳಿಯು ಪಾಲಿಸತಕ್ಕಂಥ ಪ್ರಕ್ರಿಯಾ ನಿಯಮಗಳು;

(ಬಿಎ) ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಅಧಿಕಾರಿಗಳು ಮತ್ತು ಇತರ ನೌಕರರನ್ನು ನೇಮಿಸತಕ್ಕ ರೀತಿ;

(ಸಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿವಸಗಳ ಒಟ್ಟು ಅವಧಿಯವರೆಗೆ ಇಡತಕ್ಕುದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡುವುದಕ್ಕೆ ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕುದು ಅಥವಾ ಪರಿಣಾಮಕಾರಿಯಾಗಿರತಕ್ಕುದಲ್ಲ; ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕುದಲ್ಲ.

**30. ವಿನಿಯಮಗಳ ರಚನಾಧಿಕಾರ.-** (1) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ನಿರ್ದೇಶಕರ ಮಂಡಳಿಯು, ಪ್ರಾಯೋಜಕ ಬ್ಯಾಂಕ್ ಮತ್ತು ರಾಷ್ಟ್ರೀಯ ಬ್ಯಾಂಕಿನೊಂದಿಗೆ ಸಮಾಲೋಚಿಸಿದ ತರುವಾಯ ಮತ್ತು ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅಸಂಗತವಾಗಿಲ್ಲದ, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಅವಶ್ಯ ಅಥವಾ ವಿಹಿತವಾದ ವ್ಯವಸ್ಥೆಯನ್ನು ಮಾಡುವುದಕ್ಕಾಗಿನ ಎಲ್ಲಾ ವಿಷಯಗಳಿಗಾಗಿ ಉಪಬಂಧಿಸಲು ವಿನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ಪ್ರತಿಯೊಂದು ನಿರ್ದೇಶಕರ ಮಂಡಲಿಯು, ವಿನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕುದು ಮತ್ತು ಆ ಸರ್ಕಾರವು ಅದರ ಒಂದು ಪ್ರತಿಯನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿವಸಗಳ ಒಟ್ಟು ಅವಧಿಯವರೆಗೆ ಇರಿಸುವಂತೆ ಮಾಡತಕ್ಕುದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ವಿನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ವಿನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕುದು ಅಥವಾ ಪರಿಣಾಮಕಾರಿಯಾಗಿರತಕ್ಕುದಲ್ಲ; ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

**31. ತೊಂದರೆಗಳ ನಿವಾರಣೆ.-** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು ಆ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಅದಕ್ಕೆ ಅವಶ್ಯಕವೆಂದು ಕಂಡುಬರಬಹುದಾದ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿಲ್ಲದಂಥ, ಆದೇಶವನ್ನು ಮಾಡಬಹುದು:

ಪರಂತು, ಯಾವುದೇ ಅಂಥ ಆದೇಶವನ್ನು ಈ ಅಧಿನಿಯಮದ ಪ್ರಾರಂಭದಿಂದ ಐದು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಮಾಡತಕ್ಕುದಲ್ಲ.

**32. ಅಧಿನಿಯಮವು ಇತರ ಕಾನೂನುಗಳ ಉಪಬಂಧಗಳನ್ನು ಅಧ್ಯಾರೋಹಿಸತಕ್ಕುದು.-** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಯಾವುದೇ ವ್ಯಕ್ತವಾದ ಅಥವಾ ಇಂಗಿತವಾದ ಕರಾರಿನಲ್ಲಿ ಅಥವಾ ಈ ಅಧಿನಿಯಮವನ್ನು ಹೊರತುಪಡಿಸಿ ಯಾವುದೇ ಇತರ ಕಾನೂನಿನಿಂದಾಗಿ ಪರಿಣಾಮವನ್ನು ಹೊಂದಿರುವ ಯಾವುದೇ ಲಿಖಿತದಲ್ಲಿ ತದ್ವಿರುದ್ಧವಾಗಿ ಏನೇ ಇದ್ದಾಗ್ಯೂ ಮತ್ತು ತದ್ವಿರುದ್ಧವಾಗಿ ಯಾವುದೇ ರೂಢಿ ಅಥವಾ ಆಚರಣೆ ಇದ್ದಾಗ್ಯೂ, ಪರಿಣಾಮವನ್ನು ಹೊಂದಿರತಕ್ಕುದು.

## ಅನುಸೂಚಿ

(25 (2)ನೇ ಪ್ರಕರಣವನ್ನು ನೋಡಿ)

....................... ಆದ ನಾನು ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ನಿರ್ದೇಶಕ, ಸಮಿತಿಯ ಸದಸ್ಯ, ಅಧಿಕಾರಿ, ನಿಯೋಜಿತ ಅಥವಾ ಲೆಕ್ಕ ಪರಿಶೋಧಕ (ಸಂದರ್ಭಾನುಸಾರ)ನಾಗಿ ನನ್ನನ್ನು ಅಗತ್ಯಪಡಿಸಿದ ಮತ್ತು ಸದರಿ ಬ್ಯಾಂಕಿನಲ್ಲಿ ನಾನು ಧಾರಣ ಮಾಡಿರುವ ಯಾವುದೇ ಪದ ಅಥವಾ ಸ್ಥಾನಕ್ಕೆ ಸರಿಯಾಗಿ ಸಂಬಂಧಪಡುವಂಥ ಕರ್ತವ್ಯಗಳನ್ನು ನಿಷ್ಠೆಯಿಂದ ಸತ್ಯವಾಗಿ ಮತ್ತು ನನ್ನ ಕೌಶಲ್ಯ ಮತ್ತು ಸಾಮರ್ಥ್ಯವಿರುವಷ್ಟರಮಟ್ಟಿಗೆ ನಿರ್ವಹಿಸುತ್ತೇನೆ ಮತ್ತು ನೆರವೇರಿಸುತ್ತೇನೆ ಎಂದು ಈ ಮೂಲಕ ಘೋಷಿಸುತ್ತೇನೆ.

ನಾನು, ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಕಾರ್ಯಕಲಾಪಗಳಿಗೆ ಅಥವಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನೊಂದಿಗೆ ಯಾವುವೇ ವ್ಯವಹಾರಗಳನ್ನು ಹೊಂದಿರುವ ಯಾರೇ ವ್ಯಕ್ತಿಯ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಯಾವುದೇ ಮಾಹಿತಿಯನ್ನು ಅದಕ್ಕೆ ಕಾನೂನಿನನ್ವಯ ಹಕ್ಕುಳ್ಳವನಾಗಿಲ್ಲದ ಯಾರೇ ವ್ಯಕ್ತಿಗೆ ತಿಳಿಸುವುದಿಲ್ಲವೆಂದು ಅಥವಾ ತಿಳಿಸಲು ಅವಕಾಶ ಕೊಡುವುದಿಲ್ಲವೆಂದು ಅಥವಾ ನಾನು ಯಾರೇ ಅಂಥ ವ್ಯಕ್ತಿಗೆ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ ಸೇರಿದ ಅಥವಾ ಅದರ ಸ್ವಾಧೀನದಲ್ಲಿರುವ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ವ್ಯವಹಾರಕ್ಕೆ ಅಥವಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನೊಂದಿಗೆ ಯಾವುದೇ ವ್ಯವಹಾರಗಳನ್ನು ಹೊಂದಿರುವ ಯಾರೇ ವ್ಯಕ್ತಿಯ ವ್ಯವಹಾರಕ್ಕೆ ಸಂಬಂಧಪಟ್ಟ ಯಾವುವೇ ಪುಸ್ತಕಗಳು ಅಥವಾ ದಸ್ತಾವೇಜುಗಳನ್ನು ತನಿಖೆ ಮಾಡಲು ಅಥವಾ ಅವುಗಳನ್ನು ನೋಡಲು ಅವಕಾಶ ಕೊಡುವುದಿಲ್ಲವೆಂದು ಸಹ ಘೋಷಿಸುತ್ತೇನೆ.

ಸಹಿ...............................

ನನ್ನ ಮುಂದೆ ರುಜು ಮಾಡಲಾಗಿದೆ.

ದಿನಾಂಕ.......................

* * * * * *